
ಜನಪದ ವೈಚಾರ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೪ ಜನವರಿ ೨೦೦೪ ಸಂಚಿಕೆ ೬



ರಾಷ್ಟ್ರಪತಿ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ

ಎಲ್ಲಿಗೆ ಬಂತು ಗಣರಾಜ್ಯ?

* ಈ ಸಂಚಿಕೆಯಲ್ಲಿ *

ಜನಪದ ವಿಚಾರ

ವೈಚಾರಿಕತೆಯ ತಿಂಗಳ ಡೈಜಸ್ಟ್

ಜನವರಿ ೨೦೦೪

ಸಂಪುಟ ೪

ಸಂಚಿಕೆ ೬

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

✆ ೦೮೨೩೬ ೨೯೮೭೫೪

e-mail - janapada@yahoo.com

ಶ್ರೀ ಪಾರ್ಥಿವ ಪುರುಷನಿಗೆ

ಓಂ! ಹಾಲು ಹಳ್ಳ ಹರಿಯಲಿ,
ಬೆಣ್ಣೆ ಬೆಟ್ಟವಾಗಲಿ!
ಜೇನು ಮಳೆಯು ಸುರಿಯಲಿ,
ತೊಟ್ಟಿಲೊಂದು ತೂಗಲಿ!

ಓಂ! ಪೈರು ಪಚ್ಚೆ ಬೆಳೆಯಲಿ,
ತೆನೆಯ ಚಿನ್ನ ಹೊಳೆಯಲಿ!
ಹಕ್ಕಿ ಹೊಟ್ಟೆ ತಣಿಯಲಿ,
ಮಿಗವು ಸೊಗಸಿ ಕುಣಿಯಲಿ!

ಓಂ! ಮುಗಿದು ಸಮರ
ನರಬಲಿ,
ನರರು ನರರ ನಂಬಲಿ!
ಸ್ವಾಮಿಯಮೃತ ಕೃಪೆಯಲಿ
ಶಾಂತಿ ಜಗವ ತುಂಬಲಿ!

ಓಂ! ತರಣಿಯಾಗೆ ತಾರಣಂ,
ದಡವ ಸೇರಲೀ ರಣಂ!
ಸಾರ್ಥಮಾಗೆಪಾರ್ಥಿವಂ,
ಪೃಥ್ವಿಇಗಿಳಿಯಲಾ ದಿವಂ!

ಓಂ ಶಾಂತಿಃ ಶಾಂತಿಃ ಶಾಂತಿಃ

-ಕುವೆಂಪು

ವಿಚಾರ ದೀಪ್ತಿ. . .

ನಾವು ವಾಸಿಸುತ್ತಿರುವ ಈ ಕಾಲದಲ್ಲಿ ವಿಜ್ಞಾನ ಎಂದು ಕರೆಯಲ್ಪಡುವ ಭೌತ ವಿಜ್ಞಾನ(Science) ಅತ್ಯಂತ ಪ್ರಾಮಾಣಿಕವೆಂದು ಮಾನ್ಯತೆ ಪಡೆದಿದೆ. ಈ ವಿಜ್ಞಾನವು ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡಬಲ್ಲದು ಎಂದು ಘೋಷಿಸುವವರು ಹೇರಳವಾಗಿದ್ದಾರೆ. ಈ ವಿಜ್ಞಾನಶಾಸ್ತ್ರದ ಪರಿಚಯವಿಲ್ಲದಿದ್ದರೂ ವಿಜ್ಞಾನದಿಂದ ಆಗಿರುವ ಭೌತಿಕ ಪ್ರಯೋಜನಗಳಿಂದ ಆಕರ್ಷಿತರಾಗಿ ಅದನ್ನು ಪರಮಾಚಾರ್ಯ ಸ್ಥಾನದಲ್ಲಿ ಕೂರಿಸುವವರೇ ಹೆಚ್ಚು ಮಂದಿ. ಹಾಗೆಯೇ ವೇದಾರ್ಥ ಜ್ಞಾನವಿಲ್ಲದಿದ್ದರೂ ಶ್ರದ್ಧೆಯಿಂದ ವೇದವು ಎಲ್ಲ ಜ್ಞಾನಗಳ ಆಕರ ಎಂದು ಗೌರವಿಸುವ ಜನರೂ ಬಹುಮಂದಿ ಇದ್ದಾರೆ. ಈ ಎರಡೂ ಪಕ್ಷಗಳಲ್ಲಿಯೂ ಅತಿವಾದ ಮಾಡುವ ಜನರೇ ಹೆಚ್ಚು. ಭೌತಿಕ ವಿಜ್ಞಾನವನ್ನು ಬಿಟ್ಟರೆ ಬೇರೆ ಜ್ಞಾನವಾಗಲೀ, ಶಾಸ್ತ್ರವಾಗಲೀ, ವೇದವಾಗಲೀ ಯಾವುದೂ ಇಲ್ಲ ಎಂಬುದು ಕೆಲವರ ವಿಚಾರ. ಅಲ್ಲದೆ ವೇದವು ವಿಜ್ಞಾನಕ್ಕೆ ವಿರೋಧಿ. ಅದು ಮೂಢನಂಬಿಕೆಗಳ ರಾಶಿ. ಆದುದರಿಂದ ಅದನ್ನು ತ್ಯಜಿಸಿ ಎಂದು ಉಪದೇಶವನ್ನು ನೀಡುತ್ತಾರೆ. ಹಾಗೆಯೇ ಭೌತವಿಜ್ಞಾನವೂ ಶಾಸ್ತ್ರವೇ ಅಲ್ಲ, ಅದರಲ್ಲಿ ಏನೇನು ಮಹಿಮೆ ಇದೆ ಎಂದು ನೀವು ಹೇಳುತ್ತೀರೋ ಅದೆಲ್ಲಾ ವೇದದಲ್ಲೇ ಇದೆ ಎಂದು ವೇದವಾದಿಗಳು ಹೇಳುತ್ತಾರೆ. ಆಧುನಿಕ ಭೌತವಿಜ್ಞಾನದಲ್ಲಿ ಬರುವ ನ್ಯೂಕ್ಲಿಯರ್ ಶಕ್ತಿಯ ವಿಷಯವಾಗಲೀ, ಇಂಗಾಲಾಮ್ಲ, ಜಲಜನಕ ಮುಂತಾದ ವಿಷಯಗಳಾಗಲೀ ವೇದದಲ್ಲಿವೆಯೆ ಎಂದರೆ ಇದ್ದೇ ಇದೆ. ಇಲ್ಲದೆ ಏನು ಎಂದು ವೇದದ ಶಬ್ದ ಮತ್ತು ವಾಕ್ಯಗಳಿಗೆ ಸಂಸ್ಕೃತ ಭಾಷಾಪಾಡಿತ್ಯದಿಂದ ಸರಸ್ವತೀ ಪ್ರಾಣಪೀಡನ ಮಾಡಿ ಕಷ್ಟ ಪಟ್ಟು ನ್ಯೂಕ್ಲಿಯರ್ ಶಕ್ತಿ ಮುಂತಾದ ಅರ್ಥಗಳು ಬರುವಂತೆ ಯತ್ನಿಸುವ ಮಹಾ ಮೇಧಾವಿಗಳೂ ಇದ್ದಾರೆ. ಯಾವುದೇ ಪಕ್ಷದ ಪೂರ್ವಗ್ರಹ (Prejudice) ಕ್ಕೂ ಒಳಗಾಗದೆ ಅಂಧಾಭಿಮಾನವನ್ನು ತೊರೆದು ನಾವು ಈ ವಿಷಯವನ್ನು ಪರಿಶೀಲಿಸಬೇಕು.

–ಪಿ.ಎಸ್.ರಾಮೇಶ್ವರಾವಧಾನೀ

ಎಲ್ಲಿಗೆ ಬಂತು ಗಣರಾಜ್ಯ?

-ಸುರೇಂದ್ರ ಕೌಲಗಿ

೧೯೪೭ ಆಗಸ್ಟ್ ೧೫ ರಂದು ದಿಲ್ಲಿಯ ಕೆಂಪುಕೋಟೆಯ ಮೇಲೆ ಇಂಗ್ಲೀಷ್ ಆಡಳಿತದ ದ್ಯೋತಕವಾಗಿ ಹಾರಾಡುತ್ತಿದ್ದ ಯುನಿಯನ್ ಜಾಕ್ ಧ್ವಜ ಇಳಿದು ಆ ಸ್ಥಳದಲ್ಲಿ ನಮ್ಮ ಈಗಿನ ರಾಷ್ಟ್ರಧ್ವಜ ಹಾರಲು ಪ್ರಾರಂಭಿಸಿದಾಗಿನಿಂದ ನಮ್ಮ ದೇಶದಲ್ಲಿ ಪ್ರಜಾ ರಾಜ್ಯದ ಯುಗ ಪ್ರಾರಂಭವಾಯಿತು.

೧೯೫೦ ಜನವರಿ ೨೬ ರಂದು ಭಾರತೀಯರೇ ರಚಿಸಿದ ಸಂವಿಧಾನ ಜಾರಿಗೆ ಬಂದ ದಿನದಿಂದ ನಮ್ಮ ದೇಶದಲ್ಲಿ ಗಣರಾಜ್ಯದ ಯುಗ ಪ್ರಾರಂಭವಾಯಿತು.

ಹೀಗೆ ಅಂದಿನಿಂದ ನಮ್ಮ ದೇಶದಲ್ಲಿ ಪ್ರಜಾರಾಜ್ಯ ಮತ್ತು ಗಣರಾಜ್ಯ ಎರಡೂ ಏಕಕಾಲಕ್ಕೆ ಮತ್ತು ಏಕರೂಪವೇನೋ ಎಂಬಂತೆ ಕೆಲಸಮಾಡುತ್ತಿವೆ.

ಇಲ್ಲಿ ಮೊಟ್ಟಮೊದಲು ನಮ್ಮ ಗಮನಕ್ಕೆ ಬರುವ ಸಂಗತಿಯೇನೆಂದರೆ ನಮ್ಮ ದೇಶದ ಬಹು ಸಂಖ್ಯಾತ ಜನರಿಗೆ ಪ್ರಜಾರಾಜ್ಯ (Democracy) ಮತ್ತು ಗಣರಾಜ್ಯ (Republic) ಇವುಗಳ ನಡುವೆ ಇರುವ ಸೂಕ್ಷ್ಮ ಭೇದಗೊತ್ತಿಲ್ಲದೆ ಇರುವುದು. ಒಂದು ಇನ್ನೊಂದಕ್ಕೆ ಸಮ ಎಂದು ಭಾವಿಸುವವರೂ ಇದ್ದಾರೆ. ಗಣರಾಜ್ಯವೆಂಬುದು ಅನೇಕ ಸಮೂಹಗಳ ಸಮುಹಾಡಳಿತ ಆಗಿರುವುದರೊಂದಿಗೆ ಅದು ಮೂಲಭೂತವಾಗಿ ಸಂವಿಧಾನ ಹಾಗೂ ಸಂವಿಧಾನದ ಜಡೆಯಿಂದ ಹರಿದು ಬರುವ ನೂರಾರು ಬಗೆಯ ಶಾಸನಗಳು; ಅವುಗಳ ಅನುಷ್ಠಾನ; ಅವುಗಳ ವಿರುದ್ಧವಾಗಿ ನಡೆದವರಿಗೆ ಶಿಕ್ಷೆ; ನ್ಯಾಯ ಬೇಡಿಕೆಗಾಗಿ ಕೋರ್ಟು-ಕಚೇರಿಗಳ ಮೆಟ್ಟಲನ್ನು ಹತ್ತುವುದು; ಮತ್ತು ಸಂವಿಧಾನದಲ್ಲಿಯ ವಿಧಿ-ವಿಧಾನಗಳ ರಕ್ಷಣೆಗಾಗಿ ಪೋಲಿಸ್ ಮತ್ತು ಮಿಲ್ಟ್ರಿಯ ಬೆಂಗಾವಲು ಇತ್ಯಾದಿಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಅಷ್ಟೇ ಅಲ್ಲ, ಸಂವಿಧಾನದತ್ತ ಹಕ್ಕುಗಳ ರಕ್ಷಣೆಗಾಗಿ ಪ್ರಜೆಗಳು ಬಹಳಷ್ಟು ಹಣ ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಅನೇಕ ಬಾರಿ ಸಂವಿಧಾನದಲ್ಲಿಯ ಮೂಲಭೂತ ಹಕ್ಕುಗಳ ಅನುಷ್ಠಾನದ ವಿಷಯದಲ್ಲಿ

ಜನಸಾಮಾನ್ಯರು ನರಿ ಮತ್ತು ದ್ರಾಕ್ಷಿ ಎಂಬ ಕಥೆಯ ಭಾವಾರ್ಥವನ್ನು ಪ್ರತಿದಿನ ಅನುಭವಿಸಬೇಕಾಗುತ್ತದೆ.

ಪ್ರಜಾರಾಜ್ಯವು ಮೂಲತಃ ಪ್ರಜೆಯ ಏಳಿಗೆಯನ್ನೇ ಬಯಸುತ್ತದೆ. ಈ ವಿಷಯದಲ್ಲಿ ಅದು ಪ್ರಜೆಯ ಆತ್ಮಗೌರವವನ್ನು ಮತ್ತುಅವನ ಆತ್ಮ ಸಾಕ್ಷಿಯನ್ನು ಬಹುವಾಗಿ ಗೌರವಿಸುತ್ತದೆ. ತನ್ನ ತೆಕ್ಕೆಯಲ್ಲಿ ಬರುವ ಪ್ರತಿಯೊಬ್ಬ ಪ್ರಜೆಯ ಏಳಿಗೆಯನ್ನು ಪ್ರಜಾರಾಜ್ಯ ಬಯಸುತ್ತದೆ. ಆದ್ದರಿಂದ ಅದು ಪ್ರಜೆಯನ್ನು ಸಮಾಜದ ಕೇಂದ್ರ್ರದಲ್ಲಿರಿಸುತ್ತದೆ. ಯಾವುದೇ ಒಂದು ದೇಶ ಪರಾಧೀನವಾಗಿದ್ದರೆ, ಅದನ್ನು ಸ್ವತಂತ್ರಗೊಳಿಸಿ ಅದಕ್ಕೊಂದು ಸಂವಿಧಾನ, ಸಂವಿಧಾನದ ಪ್ರಕಾರ ಸರಕಾರದ ರಚನೆ ಇತ್ಯಾದಿಗಳೆಲ್ಲದರ ಅಂತಿಮ ಉದ್ದೇಶ್ಯ ವ್ಯಕ್ತಿಯ ಏಳಿಗೆಯೇ. ಆದರೆ ಪ್ರಶ್ನೆ ಇರುವುದು ವ್ಯಕ್ತಿಯ ಏಳಿಗೆ ಯಾವ ಮತ್ತು ಎಂಥ ಪರಿಸರದಲ್ಲಿ ಹೆಚ್ಚು ಸಾಧ್ಯ ಎಂಬುದು. ತನ್ನಿಂದ ತನಗಾಗಿ ನಡೆಯುವ ರಾಜ್ಯ ವ್ಯವಸ್ಥೆಯಲ್ಲಿಯೋ ಅಥವಾ ತನ್ನ ಜೀವನದ ಏಳಿಗೆಯ ಸೂತ್ರಗಳ ಚಾಲನೆ ದೂರದಲ್ಲಿರುವ ಯಾವುದೋ ಅದೃಶ್ಯ ಶಕ್ತಿಯ ಮೂಲಕವೋ ಎಂಬುದು.

ಐವತ್ತು ಮೂರು ವರ್ಷಗಳ ಗಣರಾಜ್ಯದಲ್ಲಿ ಭಾರತದ ಪ್ರಜೆ ಸರ್ಕಾರದ ಅತಿಯಾದ ಮತ್ತು ಸರ್ವವ್ಯಾಪಿಯಾದ ರಾಜ್ಯ ಶಕ್ತಿಯ ಕಾರಣದಿಂದಾಗಿ ತನ್ನ ಆತ್ಮ ನಿರ್ಭರತೆಯನ್ನೂ, ಆತ್ಮಗೌರವವನ್ನೂ, ಆತ್ಮ ಸಾಕ್ಷಿಯನ್ನೂ ಕಳೆದು ಕೊಡಿಂದ್ದಾನೆ. ಜೊತೆಗೆ, ಸದಾ ಸರ್ಕಾರದ ಮುಖವನ್ನು ನೋಡುವ ಪರಾವಲಂಬಿಯಾಗಿದ್ದಾನೆ. ಅವನು ಎಂಥ ದುಃಸ್ಥಿತಿಗಿಳಿದಿದ್ದಾನೆಂದರೆ ಸಂವಿಧಾನದ ಕಾರಣದಿಂದಾಗಿ ಅವನಿಗೆ ದೊರೆತಿರುವ ಪವಿತ್ರ ಮತವನ್ನು ಹೆಂಡ, ಹಣ, ಸೀರೆ, ನಿವೇಶನ, ನೌಕರಿ, ಏಜೆನ್ಸಿ ಸೀಟು ಮುಂತಾದ ಅಪವಿತ್ರ ವಸ್ತುಗಳಿಗಾಗಿ ಮಾರುವುದರ ಮೂಲಕ ತನ್ನನ್ನು ಲಘುವಾಗಿಸಿಕೊಂಡಿದ್ದಾನೆ.

ಪ್ರಜಾರಾಜ್ಯದ ಪ್ರತಿಬಿಂಬವಾಗಿ ಗಣರಾಜ್ಯವಿದೆ. ಯಾವ ಗಣರಾಜ್ಯದಲ್ಲಿ ಪ್ರಜೆಗಳು ಯೋಗ್ಯರಾಗಿರುವುದಿಲ್ಲವೋ ಆ ಗಣರಾಜ್ಯವೂ ಸಹ ಅಭದ್ರವಾಗಿಯೇ ಉಳಿಯುತ್ತದೆ. ಗಣರಾಜ್ಯವು ಒಳ್ಳೆಯ ಸಂವಿಧಾನವನ್ನು ಹೊಂದಿರಬಹುದು. ಆದರೆ ಆ ಸಂವಿಧಾನ ಕೊಟ್ಟಿರುವ ಹಕ್ಕು ಬಾಧ್ಯತೆಗಳನ್ನು ಮಾತ್ರ ಅನುಭವಿಸಲು ಅಪೇಕ್ಷಿಸುತ್ತ ಆ ಹಕ್ಕು ಬಾಧ್ಯತೆಗಳೊಂದಿಗೆ ಬರುವ ಕರ್ತವ್ಯಗಳನ್ನು ಉಪೇಕ್ಷಿಸುತ್ತ ಇರುವಂಥ

ಪ್ರಜಾರಾಜ್ಯವುಳ್ಳ ಗಣರಾಜ್ಯ ದುರ್ಬಲವೂ, ದಿಶಾಹೀನವೂ ಆಗಿರುತ್ತದೆ. ಪರಸ್ಪರ ವೈಮನಸ್ಸನ್ನು ಹೊಂದಿರುವ ಹಾಗೂ ತಮ್ಮ ತಮ್ಮ ಹಿತಾಸಕ್ತಿಗಳ ಪಾಲನೆಯಲ್ಲಿಯೇ ತೊಡಗಿರುವ ಪ್ರಜಾಕೋಟಿಯಿಂದ ಕೂಡಿರುವ ದೇಶವಾಗಿಯೂ ಉಳಿಯಬಹುದು. ದೇಶದ ಭೌಗೋಳಿಕ ಪ್ರದೇಶ ದೊಡ್ಡದಾಗಿರಬಹುದು, ಆ ಪ್ರದೇಶದಲ್ಲಿಯ ಜನಸಂಖ್ಯೆ ಬಹು ನಿಬಿಡವಾಗಿರಬಹುದು. ಅಂಥ ದೇಶದ ಗಣರಾಜ್ಯ ಹೊರನೋಟಕ್ಕೆ ದಿವ್ಯವೂ ಭವ್ಯವೂ ಆಗಿ ಕಾಣಬಹುದು. ಆದರೆ, ಆ ಗಣರಾಜ್ಯ ವಾಸ್ತವವಾಗಿ ಗೆದ್ದಲು ತಿಂದ ದೊಡ್ಡ ಮರದಂತೆಯೋ, ಹಲ್ಲುಗಳಿಲ್ಲದ ಹುಲಿಯಂತೆಯೋ ಆಗಿರಲು ಸಾಧ್ಯ. ಅಂಥ ಪ್ರಜಾರಾಜ್ಯವುಳ್ಳ ಗಣರಾಜ್ಯವಾಗಲೀ, ಆ ಗಣರಾಜ್ಯಕ್ಕೆ ಬೆಂಬಲವಾಗಿ ನಿಂತಿರುವ ಸಂವಿಧಾನವಾಗಲೀ ಎಷ್ಟೇ ಸುಸಂಬದ್ಧವಾಗಿದೆಯೆಂದು ತೋರಿದರೂ ಅವು ಅಸಂಬದ್ಧತೆಯ ಮೂಟೆಯಾಗಿರಬಹುದು.

ಇದುವರೆಗೆ ನಮ್ಮ ಸಂವಿಧಾನವು ನೂರು ತಿದ್ದುಪಡಿಗಳನ್ನು ಹೊಂದಿದೆ. ಈ ತಿದ್ದುಪಡಿಗಳು ರಾಷ್ಟ್ರಜೀವನದ ಚೈತನ್ಯವನ್ನು ತೋರಿಸುತ್ತವೆ ಎಂಬ ಭ್ರಮೆಗೆ ಗಣರಾಜ್ಯ ಪ್ರೇಮಿಗಳು ಬೀಳುವ ಸಾಧ್ಯತೆ ಇದೆ. ಆದರೆ ಈ ಒಂದೊಂದು ತಿದ್ದುಪಡಿಯ ಹಿಂದೆ ಇದ್ದ ರಾಜಕೀಯ ಸ್ವಾರ್ಥಗಳ ಒತ್ತಾಸೆಯನ್ನು ಗಮನಿಸಿದರೆ ಆಗ ರಾಷ್ಟ್ರಚೈತನ್ಯದ ಭ್ರಮೆ ನಿರಸನವಾಗುತ್ತದೆ; ಬದಲಿಗೆ ನಮ್ಮ ಇಂದಿನ ರಾಷ್ಟ್ರನಾಯಕರ ವೈಚಾರಿಕತೆಯ ದಿವಾಳಿತನದ ದರ್ಶನವಾಗುತ್ತದೆ. ಇಷ್ಟರಲ್ಲಿಯೇ ನಡೆಯಲಿರುವ ಲೋಕಸಭಾ ಚುನಾವಣೆಯ ನಂತರ ಸ್ಥಾಪಿತಗೊಳ್ಳಲಿರುವ ಹೊಸ ಲೋಕಸಭೆಯು ಇನ್ನೆಷ್ಟು ತಿದ್ದುಪಡಿಗಳನ್ನು ತರುವುದೋ ಹೇಳಲಿಕ್ಕಾಗದು.

ಸಂವಿಧಾನ ಒಂದು ಅರ್ಥದಲ್ಲಿ ದೇಶದ ಸಮಸ್ತ ಜನಕೋಟಿಯ ಆಶೋತ್ತರಗಳ ಸಂಕೇತವೆಂದೂ ಮತ್ತು ಅದು ಪ್ರಜೆಗಳ ಪ್ರಣಾಳಿಕೆ(Manifesto) ಎಂದೂ ಹೇಳಬಹುದು. ದೇಶದ ಪ್ರಜಾರಾಜ್ಯ ಚೇತನವುಳ್ಳದ್ದೂ, ಅಭಿವೃದ್ಧಿಶೀಲವೂ ಆಗಿದೆಯೆಂಬುದನ್ನು ಪ್ರಕಟಗೊಳಿಸಲು ಅನುವಾಗಲೆಂಬ ಉದ್ದೇಶ್ಯದಿಂದ ಸಂವಿಧಾನದ ತಿದ್ದುಪಡಿಯ ಪ್ರಕ್ರಿಯೆ ಕ್ಲಿಷ್ಟಕರವಾಗದಂತೆ ಎಚ್ಚರವಹಿಸಲಾಗಿದೆಯೆಂದು ಸಂವಿಧಾನ ಕರ್ತರು ಹೇಳಿದ್ದಾರೆ. ಸದುದ್ದೇಶ್ಯದ ಈ ಎಚ್ಚರಿಕೆಯನ್ನು ಇಟ್ಟುಕೊಂಡ ಮೇಲೂ ಸಂವಿಧಾನದ ಪ್ರಮುಖ ರಚನಾಕಾರರಾದ

ಡಾ|| ಅಂಬೇಡ್ಕರ್ ಸಂವಿಧಾನದ ರಚನಾ ಸಭೆಯಲ್ಲಿ ಈ ರೀತಿ ಹೇಳಿದ್ದಾರೆ:

ಈ ಹೊಸ ಸಂವಿಧಾನ ಜಾರಿಗೆ ಬಂದ ಮೇಲೆ ದೇಶದ ಬೆಳವಣಿಗೆಗಳು ತಪ್ಪು ದಾರಿಹಿಡಿದರೆ ಅದಕ್ಕೆ ಕಾರಣ ನಾವು ಕೆಟ್ಟದಾದ ಸಂವಿಧಾನವನ್ನು ಹೊಂದಿದ್ದೇವೆ ಎನ್ನುವುದಕ್ಕಿಂತ ಮನುಷ್ಯನು ಕೆಟ್ಟವನಾಗಿದ್ದಾನೆ ಎಂದು ಹೇಳಬಯಸುತ್ತೇನೆ. ಡಾ|| ಅಂಬೇಡ್ಕರರ ಈ ಮಾತಿನ ಅರ್ಥವೇನೆಂದರೆ ಅದು ಯಾವ ಗಣರಾಜ್ಯವೇ ಇರಲಿ ಆ ಗಣರಾಜ್ಯದ ಅಸ್ತಿತ್ವಕ್ಕೆ ಪ್ರಜೆಯೇ ಮೂಲದ್ರವ್ಯ. ಬಟ್ಟೆಯ ಗುಣವಿಶೇಷ ಅದರ ದಾರದಲ್ಲಿರುವಂತೆ, ವೃಕ್ಷದ ವಿಶೇಷ ಅದರ ಮೂಲ ಬೀಜದಲ್ಲಿರುವಂತೆ. ಪ್ರಜೆ ಒಳ್ಳೆಯವನಾಗಿದ್ದರೆ, ವಿಚಾರವಂತನಾಗಿದ್ದರೆ ಎಂಥ ಕೆಟ್ಟ ಸಂವಿಧಾನವೂ ಸಾಮಾಜಿಕ ಜೀವನವನ್ನು ಬುಡಮೇಲು ಮಾಡಲಾರದು. ನಮ್ಮ ದೇಶದಲ್ಲಿ ನಾವು ಮಾಡಿದ ದೊಡ್ಡ ತಪ್ಪೇನೆಂದರೆ ಗಣರಾಜ್ಯವನ್ನೇ ಪ್ರಜಾರಾಜ್ಯವೆಂದು ಭಾವಿಸಿದ್ದು. ೧೯೫೦ ಜನವರಿ ೨೬ ರಂದು ಗಣರಾಜ್ಯವನ್ನು ಸ್ಥಾಪಿಸಿದಾಗ ನಮಗೆ ರಾಜಕೀಯ ಯಶಸ್ಸು ದೊರೆಯಿತೇ ವಿನಃ ಪ್ರಜಾರಾಜ್ಯಕ್ಕೆ ಅನಕೂಲಕರವಾದ ಮನೋಭಾವ ಜನರಲ್ಲಿ ಉಂಟಾಗಲಿಲ್ಲ. ಈ ಕೊರತೆಯ ಪರಿಣಾಮವನ್ನು ನಾವು ಪ್ರತಿದಿನ ಅನುಭವಿಸುತ್ತಿದ್ದೇವೆ. ನಮ್ಮ ದೇಶದ ಜನತೆ ಕಾನೂನುಗಳ ಗೊಂಡಾರಣ್ಯದಲ್ಲಿ ಸಿಲುಕಿದೆ. ಆದ್ದರಿಂದ ಎಂಥ ಅಪರಾಧಿಯೂ ಶಿಕ್ಷೆಗೆ ಒಳಗಾಗುವುದಿಲ್ಲ; ಜಾಮೀನು ಮೇಲೆ ಬಿಡುಗಡೆಹೊಂದಿ ರಾಜಾರೋಶವಾಗಿ ತನ್ನ ಮೊದಲಿನ ಅಪರಾಧೀ ವ್ಯವಹಾರಗಳನ್ನೇ ಮುಂದುವರಿಸುತ್ತಾನೆ; ನ್ಯಾಯಾಂಗ-ಕಾರ್ಯಾಂಗ-ಶಾಸಕಾಂಗಗಳ ಮಧ್ಯ ದಿನನಿತ್ಯ ಘರ್ಷಣೆ ನಡೆಯುತ್ತಲೇ ಇರುತ್ತದೆ. ಅಧಿಕಾರಾರೂಢ ಪಕ್ಷವು ಸಂವಿಧಾನವನ್ನು ತನಗನಕೂಲವಾಗುವಂತೆ ತಿರುಚುವುದು ಸಾಮಾನ್ಯವಾಗಿದೆ. ೧೯೭೫ ರಲ್ಲಿ ಇಂದಿರಾಗಾಂಧೀ ಸಂವಿಧಾನವನ್ನು ತಿರುಚಿಯೇ ಅಲ್ಲವೆ ಸಂವಿಧಾನವನ್ನು ಮೂಲೆಗುಂಪಾಗಿರಿಸಿದ್ದು! ಆಗ ಸಂವಿಧಾನದ ಕಾವಲುಗಾರನೆನಿಸಿದ ರಾಷ್ಟ್ರಪತಿ ಕೂಡ ಪ್ರಧಾನ ಮಂತ್ರಿಗೆ ದಾಸನಾದದ್ದು! ಇನ್ನೊಂದು ಉದಾಹರಣೆ ಸಂವಿಧಾನದ ೩೫೬ನೇ ವಿಧಿಗೆ ಸಂಬಂಧಿಸಿದ್ದು. ಈ ವಿಧಿಯು ಕೇಂದ್ರ ಸರ್ಕಾರ ತನ್ನ ಆಡಳಿತವನ್ನು ರಾಜ್ಯಗಳ ಮೇಲೆ ಹೇರುವ ಸಂದರ್ಭಗಳಾವವು ಎಂದು ಸ್ಪಷ್ಟವಾಗಿ ಹೇಳಿದ್ದರೂ ನಮ್ಮ ಅಧಿಕಾರಾರೂಢ ಪಕ್ಷಗಳು ಆ ವಿಧಿಯನ್ನು ತಮ್ಮ ರಾಜಕೀಯ ಅನುಕೂಲಕ್ಕಾಗಿ, ಪ್ರಜೆಗಳ ಅನುಕೂಲಕ್ಕಾಗಿಯಲ್ಲ, ಕಳೆದ ೩೬ ವರ್ಷಗಳಲ್ಲಿ ೬೫ ಕ್ಕಿಂತಲೂ ಹೆಚ್ಚು

ಸಲ ತಿರುಚಿವೆ! ಹೀಗಾಗಿ ಸಂವಿಧಾನದಲ್ಲಿ ಸಂದಿಸಿರುವ ಗಣರಾಜ್ಯದ ಸೂಕ್ಷ್ಮ ಸಂವೇದನೆಗಳು ನಶಿಸಿಹೋಗಿವೆ. ಸಂವಿಧಾನರಿತ್ಯ ನಮ್ಮ ದೇಶ ಒಮ್ಮೆ ಗಣರಾಜ್ಯವಾಗಿಯೂ ಇನ್ನೊಮ್ಮೆ ಸಂಯುಕ್ತ ರಾಜ್ಯವಾಗಿಯೂ ಬದಲಾವಣೆಗೊಳ್ಳುವುದರಿಂದ ನಮ್ಮ ಗಣರಾಜ್ಯವು ಸಂವಿಧಾನವೆಂಬ ಹೊದಿಕೆಯುಳ್ಳ ಗೋಸುಂಬೆಯೋ ಅಥವಾ ಊಸರವಳ್ಳಿಯೋ ಎಂಬ ಅನುಮಾನ ಬರುತ್ತದೆ.

ಮೊದಲು ಪ್ರಜಾರಾಜ್ಯ, ನಂತರ ಸಂವಿಧಾನಾತ್ಮಕ ಗಣರಾಜ್ಯ ಇವುಗಳ ಸ್ಥಾಪನೆಯ ಮೊದಲ ಹೆಜ್ಜೆಗಳಲ್ಲಿಯೇ ನಾವು ಕೆಲ ತಪ್ಪುಗಳನ್ನು ಮಾಡಿದ್ದೇವೆ. ಮೊದಲ ಮುಖ್ಯ ತಪ್ಪೇನೆಂದರೆ ಸಂವಿಧಾನವು ಜಮ್ಮು-ಕಾಶ್ಮೀರ ರಾಜ್ಯವನ್ನು ಬಿಟ್ಟು ದೇಶದ ಉಳಿದೆಲ್ಲ ರಾಜ್ಯಗಳಿಗೆ ಅನ್ವಯಿಸುತ್ತದೆ ಎಂದು ಹೇಳಿದ್ದು. ಒಂದು ಕಡೆಗೆ ಇಡೀ ದೇಶ ಒಂದು ಗಣರಾಜ್ಯವೆಂದು ಹೇಳುತ್ತ ಇನ್ನೊಂದೆಡೆ ಆ ಗಣರಾಜ್ಯವನ್ನು ವಿರೂಪಗೊಳಿಸಿದ್ದು ವಿಘ್ನಗೊಂಡಿರುವ ವಿಗ್ರಹ ಪೂಜೆಗೆ ಅರ್ಹವಲ್ಲವೆಂಬತೆ ಇದಾಗಿದೆ. ಇದಕ್ಕೆ ಕಾರಣವಾಗಿ ಅನೇಕ ರಾಜಕಿಯ ಒತ್ತಾಸೆಗಳು ಇರಬಹುದು ಆದರೆ ಇದು ಚಂದ್ರನಲ್ಲಿಯ ಕಳಂಕದಂತಾಗಿರುವುದು ಮಾತ್ರ ವಿಷಾದನೀಯ; ಇನ್ನು ಎರಡನೇಯ ತಪ್ಪು ಗಣರಾಜ್ಯದ ಸತ್ವಪರೀಕ್ಷೆಯಂತಿರುವ ಏಕರೂಪ ನಾಗರಿಕ ಸಂಹಿತೆ ಇಲ್ಲದಿರುವುದು. ಈ ಲೋಪಕ್ಕೂ ರಾಜಕಿಯ ಒತ್ತಾಸೆಗಳು ಕಾರಣವಿರಬಹುದು: ಆದರೆ ಗಣರಾಜ್ಯವೆಂಬುದು ಸಮೂಹಾಡಳಿತ ಎಂಬ ತತ್ವಕ್ಕೆ ವಿರೋಧವಾಗಿದೆ. ಇನ್ನು ಮೂರನೇ ತಪ್ಪೇನೆಂದರೆ ಲೋಕತಂತ್ರ ಗಣರಾಜ್ಯವನ್ನಾಗಿ ಮಾಡಲು ಸಂಕಲ್ಪಿತರಾದ ನಾವು ಸ್ವತಃ ಲೋಕತಂತ್ರ ಅಥವಾ ಪ್ರಜಾರಾಜ್ಯ ವ್ಯವಸ್ಥೆಗೆ ಮಾನಸಿಕವಾಗಿ ಸಿಧ್ಧರಾಗದೇ ಇದ್ದುದು: ನಾಲ್ಕನೇ ತಪ್ಪು ಸಮಾಜವಾದಿ ಗಣರಾಜ್ಯವನ್ನಾಗಿಮಾಡಲು ಹೊರಟ ನಾವು ನಮ್ಮ ದೇಶವನ್ನು ಪಾಶ್ಚಿಮಾತ್ಯ ಮಾದರಿಯ ಬಂಡವಾಳ ಶಾಹಿ ಸಮಾಜ ರಚನೆಗೆ ಅವಕಾಶವಿರುವಂಥಹ ದೋಷವನ್ನು ಸಂವಿಧಾನದಲ್ಲಿ ಉಳಿಸಿಕೊಂಡದ್ದು. ಐದನೇಯ ತಪ್ಪು ನಮ್ಮ ದೇಶದಲ್ಲಿ ಪುರಾತನ ಕಾಲದಿಂದ ಮುಖಾಮುಖಿ ಪ್ರಜಾರಾಜ್ಯಗಳೂ, ಗಣರಾಜ್ಯಗಳೂ ಆಗಿದ್ದ ಗ್ರಾಮಗಳನ್ನು ಉಪೇಕ್ಷಿಸಿದ್ದು. ಈ ಎಲ್ಲ ಕಾರಣದಿಂದಾಗಿ ಸಂವಿಧಾನ ಕೊಟ್ಟ ಶಾಸಕೀಯ ಹಕ್ಕು ಬಾಧ್ಯತೆಗಳ ಕಡೆಗೆ ನಮ್ಮ ಜನತೆಯ ಗಮನ ಹೋಯಿತೇ ಹೊರತು ಲೋಕಶಕ್ತಿಯಾಧಾರಿತ ಪ್ರಜಾರಾಜ್ಯದ ಸ್ಥಾಪನೆಯ

ಕಡೆಗೆ ಗಮನಹೋಗಲಿಲ್ಲ. ಆದ್ದರಿಂದ ಸಂವಿಧಾನದ ಅಂಗೀಕಾರದ ೫೩ ವರ್ಷಗಳ ತರುವಾಯವೂ ಸಂವಿಧಾನದ ಸಾಮಾಜಿಕರಣವಾಗದೆ ಅದು ನ್ಯಾಯಾಂಗ–ಶಾಸಕಾಂಗ– ಕಾರ್ಯಾಂಗಗಳ ಜೇಡರ ಬಲೆಯಲ್ಲಿ ಸಿಕ್ಕಿ ಕೊಂಡಿದೆ. ಮುಂದೆ ಇಂಥ ಪರಿಸ್ಥಿತಿ ಊಟಾಗುತ್ತದೆಂಬ ದೂರ ದೃಷ್ಟಿಯಿಂದಲೋ ಏನೋ ಎಂಬಂತೆ ಗಾಧೀಜಿಯವರು ಪ್ರಜಾರಾಜ್ಯ ಮತ್ತು ಗಣರಾಜ್ಯಗಳ ಹಿತಮಿತ ಸಮ್ಮಿಲನವನ್ನು ಬಯಸಿದ್ದರು. ತಮ್ಮ ಬಯಕೆಯನ್ನು ಈ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾರೆ; ಭಾರತದಲ್ಲಿ ಏಳು ಲಕ್ಷ ಹಳ್ಳಿಗಳಿವೆ. ಪ್ರತಿಯೊಂದು ಗ್ರಾಮವೂ ಆಯಾ ಗ್ರಾಮದ ಜನರ ಇಚ್ಛೆಗನುಗುಣವಾಗಿ ರಚಿತವಾಗುತ್ತದೆ. ಅವರೆಲ್ಲರೂ ಮತವನ್ನು ಚಲಾಯಿಸುವರು ೪೦ ಕೋಟಿ ಮತಗಳ ಬದಲಾಗಿ ಏಳುಲಕ್ಷ ಮತಗಳು ಮಾತ್ರ ಉಳಿಯುವವು. ಅಂದರೆ ಪ್ರತಿಯೊಂದು ಹಳ್ಳಿಯೂ ಒಂದು ಮತವನ್ನು ಹೊಂದಿರುವುದು. ಗ್ರಾಮಗಳು ಜಿಲ್ಲಾಡಳಿತವನ್ನು ಆಯ್ಕೆ ಮಾಡುವವು; ಜಿಲ್ಲಾ ಆಡಳಿತವು ಪ್ರದೇಶ ಆಡಳಿತವನ್ನು ಆಯ್ಕೆ ಮಾಡುವುದು; ಪ್ರಾದೇಶಿಕ ಆಡಳಿತಗಳು ರಾಷ್ಟ್ರಪತಿಯನ್ನು ಆಯ್ಕೆ ಮಾಡುವವು. ರಾಷ್ಟ್ರಪತಿ ಕಾರ್ಯಾಂಗದ ಮುಖ್ಯಸ್ಥನಾಗಿರುತ್ತಾನೆ. ಹೀಗೆ ಗಣರಾಜ್ಯದ ಸ್ಥಾಪನೆಗೆ ಮುಂಚೆ ಪ್ರಜಾರಾಜ್ಯವನ್ನು ಸ್ಥಾಪಿಸುವುದರ ಮೂಲಕ ನಿಜ ಅರ್ಥದಲ್ಲಿ ಗಣರಾಜ್ಯವೆಂಬ ಗಾಡಿಯ ಮುಂದೆ ಪ್ರಜಾರಾಜ್ಯವೆಂಬ ಎತ್ತನ್ನು ಗಾಂಧೀ ಕಟ್ಟ ಬಯಸಿದ್ದರು. ಆದರೆ ಆದದ್ದು ಇದಕ್ಕೆ ವಿರುದ್ಧ. ಗಣರಾಜ್ಯವೇ ಪ್ರಜಾರಾಜ್ಯವನ್ನು ಎಳೆದುಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಯಿತು. ಗಾಂಧೀಜಿಯವರ ಈ ವಿಚಾರವನ್ನು ಪ್ರಸ್ತಾಪಿಸುವ ಸಂದರ್ಭದಲ್ಲಿ ರೋಮನ್ನರ ಹಳೆಗಾದೆಯೊಂದು ಜ್ಞಾಪಕಕ್ಕೆ ಬರುತ್ತದೆ. ಆ ಗಾದೆ ಹೀಗಿದೆ: Whatever touches all should be decided by all. ಎಲ್ಲರಿಗೂ ಸಂಬಂಧಪಟ್ಟ ವಿಷಯ ಎಲ್ಲ ಭಾಗಿದಾರಿಕೆಯಿಂದ ತೀರ್ಮಾನಿಸಲ್ಪಡಬೇಕು. ರೋಮನ್ನರ ಈ ಗಾದೆಯಲ್ಲಿ ಪ್ರಜಾರಾಜ್ಯದ ಛಾಯೆಯಿದೆ. ಇಂಥ ಪ್ರಜಾರಾಜ್ಯದ ಸ್ಥಾಪನೆ ಮೊದಲು ಆಗಬೇಕಿದೆ. ಆನಂತರ ಆ ಪ್ರಜಾರಾಜ್ಯವೇ ಗಣರಾಜ್ಯದ ರೂಪರೇಖೆಗಳನ್ನು, ವ್ಯವಹಾರಿಕಾಚರಣೆಯ ರೀತಿನೀತಿಗಳನ್ನು ನಿರ್ಧರಿಸುವುದು. ಗ್ರಾಮಗಳು ಗಣರಾಜ್ಯವಾಗಬೇಕೆಂಬ ವಿಚಾರವನ್ನು ಡಾ॥ ಅಂಬೇಡ್ಕರ್ ಒಪ್ಪದಿದ್ದರೂ ಅವರ ಸೂಕ್ಷ್ಮಮತಿ ಮತ್ತು ಸೂಕ್ಷ್ಮದೃಷ್ಟಿಯ ಕಾರಣದಿಂದಾಗಿ ಗಣರಾಜ್ಯದಲ್ಲಿ ಗ್ರಾಮಗಳ ಮಹತ್ವವನ್ನು

ತಿಳಿದವರಾಗಿದ್ದರು. ಆದ್ದರಿಂದ ಸಂವಿಧಾನ ಸಭೆಯಲ್ಲಿ ಅವರು ತಮ್ಮ ಈ ಅನಿಸಿಕೆಯನ್ನು ವ್ಯಕ್ತಪಡಿಸದೇ ಇರಲಾರದಾದರು. ಅವರು ಆಗ ಹೇಳಿದ ಮಾತು ಈಗಲೂ ಸೂಕ್ತವಾಗಿದೆ. ಅವರು ಹೇಳಿದ್ದು ಹೀಗೆ(೧೯೪೯ ನವೆಂಬರ್ ೨೫/೨೬) ಸಂವಿಧಾನವು ಎಷ್ಟೇ ಒಳ್ಳೆಯದಾಗಿರಬಹುದು. ಅದನ್ನು ನಿರ್ವಹಿಸುವವರು ಕೆಟ್ಟವರಾಗಿದ್ದರೆ ಆ ಒಳ್ಳೆಯ ಸಂವಿಧಾನ ಸಹ ಕೆಟ್ಟದಾಗಿರುವಂತೆನಿಸುವುದು. ಅದೇ ರೀತಿ ಕೆಟ್ಟದಾದ ಸಂವಿಧಾನ ಒಳ್ಳೇ ನಿರ್ವಾಹಕರ ಕಾರಣದಿಂದಾಗಿ ಒಳ್ಳೆಯ ಸಂವಿಧಾನವೆನಿಸುವುದು.

ಗಾಂಧೀಯವರ ಪ್ರಕಾರ ಈ ಒಳ್ಳೆಯತನ ಮತ್ತು ಕೆಟ್ಟತನದ ಶಿಕ್ಷಣ ಪ್ರಜೆಗಳಿಗೆ ಪರಸ್ಪರಾವಲಂಬಿತ ಮತ್ತು ಮುಖಾಮುಖಿಯಾದ ಸಮೂಹಗಳಲ್ಲಿ ಮಾತ್ರ ಸಿಗಲು ಸಾಧ್ಯ. ಇಂಥ ಸಮೂಹ ಗ್ರಾಮಗಳಲ್ಲಿದೆಯೇ ಹೊರತು ನಗರಗಳಲಿಲ್ಲ.

ಅಂಬೇಡ್ಕರರ ಪ್ರಕಾರ ಸಂವಿಧಾನದ ಜಾರಿಯಾಗುವಿಕೆ ಪೂರ್ಣವಾಗಿ ಅದರ ಮೂಲ ಸ್ವಭಾವವನ್ನು ಅವಲಂಬಿಸಿಲ್ಲ. ಅದು ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಇತ್ಯಾದಿ ಅವಯವಗಳನ್ನು ಮಾತ್ರ ಕೊಡಬಲ್ಲದೇ ಹೊರತು, ಪ್ರಭುತ್ವ ಈ ಅವಯವಗಳ ಉಪಯೋಗ ಜನತೆಯ ಇಚ್ಛೆ ಮತ್ತು ಜನತೆ ಆಯ್ಕೆ ಮಾಡಿ ಕಳುಹಿಸುವ ರಾಜಕಿಯ ಪಕ್ಷಗಳ ಇಚ್ಛೆಯನ್ನು ಅವಲಂಬಿಸಿದೆ. ಭವಿಷ್ಯದಲ್ಲಿ ಜನತೆ ಮತ್ತು ಪಕ್ಷಗಳು ಯಾವ ರೀತಿ ವರ್ತಿಸುತ್ತವೆ ಎಂದು ಯಾರುತಾನೆ ಹೇಳಲು ಸಾಧ್ಯ? ಆದ್ದರಿಂದ ಜನತೆಯ ಹಾಗೂ ಪಕ್ಷಗಳ ವರ್ತನೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಸಂವಿಧಾನ ಒಳ್ಳೆಯದೆ, ಕೆಟ್ಟದೆ ಎಂದು ತೀರ್ಮಾನ ಕೊಡಲು ಸಾಧ್ಯವಾಗಲಾರದು. ಹೊಸದಾಗಿ ಜನ್ಮ ತಳೆದಿರುವ ಪ್ರಜಾರಾಜ್ಯವು ತನ್ನ ಹೊರ ಸ್ವರೂಪವನ್ನು ಕಾಯ್ದಿಟ್ಟುಕೊಂಡೂ ಸರ್ವಾಧಿಕಾರದತ್ತ ವಾಲಬಹುದೆಂದೂ ಅಂಬೇಡ್ಕರ್ ಎಚ್ಚರಿಸಿದ್ದರು. ಅವರ ಈ ಊಹೆ ಕೆಲವೇ ವರ್ಷಗಳ ಹಿಂದೆ ನಿಜವಾಗಿತ್ತೆಂಬುದು ನಮಗೆ ಗೊತ್ತಿದೆ. ಆದ್ದರಿಂದ ಪ್ರಜಾರಾಜ್ಯವನ್ನು ಕೇವಲ ಸ್ವರೂಪ ಮಾತ್ರದಲ್ಲಿಯಲ್ಲ, ಅಂತಃ ಸಾಕ್ಷಿಯಲ್ಲೂ ಉಳಿಸಿಕೊಳ್ಳ ಬೇಕಾದರೆ ನಾವೇನು ಮಾಡಬೇಕೆಂಬುದನ್ನು ಸಹ ಅಂಬೇಡ್ಕರ ಈ ಮಾತುಗಳಲ್ಲಿ ಹೇಳಿದ್ದಾರೆ:

೧) ಸಂವಿಧಾನಾತ್ಮಕ ವಿಧಿಗಳ ಬಗ್ಗೆ ಕಟ್ಟುನಿಟ್ಟಿನ ಬದ್ಧತೆ;

೨) ನಮ್ಮ ರಾಜಕಿಯ ಗುಣಾತ್ಮಕ ಪ್ರಜಾರಾಜ್ಯವನ್ನು ಸಾಮಾಜಿಕ

ಗುಣಾತ್ಮಕವನ್ನಾಗಿಯೂ ಮಾಡುವುದು; ವ್ಯಕ್ತಿ ಪೂಜೆಯನ್ನು ಸಾರಾಸಗಟಾಗಿ ಬಹಿಷ್ಕರಿಸುವುದು; ಭಕ್ತಿ ಅಥವಾ ನಾಯಕನ ಪೂಜೆ ಕ್ರಮೇಣ ಪ್ರಜಾರಾಜ್ಯವನ್ನು ಅವನತಿಯತ್ತ ಒಯ್ಯುತ್ತ ಕೊನೆಗೆ ಸರ್ವಾಧಿಕಾರಕ್ಕೆ ದಾರಿಮಾಡಿಕೊಡುತ್ತದೆ; ಮತ್ತು ಸಂವೈಧಾನಿಕ ನೈತಿಕತೆಯೆಂಬುದು ಸಹಜ ಸಿದ್ಧವಾದುದಲ್ಲ. ಅದನ್ನು ಜನತೆಯಲ್ಲಿ ಬೆಳೆಸಬೇಕಾಗುತ್ತದೆ. ನಮ್ಮ ಜನ ಇದನ್ನು ಇನ್ನೂ ಅರ್ಥಮಾಡಿಕೊಂಡಿಲ್ಲ ಎಂಬುದು ನಮಗೆ ಗೊತ್ತಿರಬೇಕು. ನಮ್ಮ ಈಗಿನ ಪ್ರಜಾರಾಜ್ಯವು ಭೂಮಿಯ ಮೇಲ್ಪದರದ್ದಾಗಿದೆ. ಆದ್ದರಿಂದ ಅದು ಅ-ಪ್ರಜಾರಾಜ್ಯವಾಗಿದೆ. ಪ್ರಜೆಗಳಿಗೆ ಪ್ರಜಾರಾಜ್ಯದಲ್ಲಿ ಶಿಕ್ಷಣವನ್ನು ಕೊಡುವ ಕೆಲಸವನ್ನು ರಾಜಕಾರಣಿಗಳು ಮಾಡಬೇಕಿತ್ತು. ಆದರೆ ಮಾಡಿಲ್ಲ. ಬದಲಿಗೆ ಅವರು ಊಳಿಗಮಾನ್ಯ ಪದ್ಧತಿಯ ಧಣಿಯಂತಾಗಿದ್ದಾರೆ. ಅಂಬೇಡ್ಕರರು ಹೇಳಿದ ಈ ಮಾತು ಬಹಳ ಮುಖ್ಯವಾಗಿದೆ. ಈ ವಿಷಯಗಳ ಕಡೆಗೆ ಗಮನಕೊಡಬೇಕಾದುದು ಅಗತ್ಯವಾಗಿದೆಯಲ್ಲದೆ, ನಮ್ಮ ಗಣರಾಜ್ಯ ೨೦೦೦ಳನೇ ಇಸ್ವಿಯ ಹೊತ್ತಿಗೆ ಎಲ್ಲಿಗೆ ಬಂದು ನಿಂತಿದೆ ಎಂಬುದನ್ನು ತೋರಿಸಲು ಕೂಡ ಸಹಕಾರಿಯಾಗಿವೆ.

ಸಂವಿಧಾನಾಧಾರಿತ ಗಣರಾಜ್ಯ ಸ್ಥಾಪನೆಗೆ ಎಷ್ಟೋ ವರ್ಷಗಳ ಮುನ್ನವೇ ಸುಮಾರು ಮೂವತ್ತು ವರ್ಷಗಳಷ್ಟು ಮುನ್ನವೇ ಭಾರತೀಯರಿಗೆ ಗಾಂಧೀ ಸತ್ಯಾಗ್ರಹದ ಅಸ್ತ್ರವನ್ನು ಪರಿಚಯಿಸಿ ದೇಶದ ಜನತೆಗೆ ಪ್ರಜಾರಾಜ್ಯದ ಪರಿಚಯವನ್ನು ಮಾಡಿ ಕೊಡುವ ಬಹುದೊಡ್ಡ ಆಂದೋಲನವನ್ನೇ ಪ್ರಾರಂಭಿಸಿದ್ದರು. ಅದರ ಅಂಗವಾಗಿ ಅವರು ಖಾದಿ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಗ್ರಾಮೋದ್ಯೋಗಗಳ ಪುನರುತ್ಥಾನ, ಗ್ರಾಮಸ್ವಾವಲಂಬನೆ, ಕೋಮು ಸೌಹಾರ್ದತೆ ಜೀವನ ಶಿಕ್ಷಣ, ಮುಂತಾದ ರಚನಾತ್ಮಕ ಕಾರ್ಯಗಳನ್ನು ದೇಶದ ಮುಂದೆ ಇಡುವುದರ ಮೂಲಕ ದೇಶದಲ್ಲಿ ಪ್ರಜಾರಾಜ್ಯದ ಭದ್ರ ಅಡಿಪಾಯವನ್ನು ಹಾಕಲು ಪ್ರಯತ್ನಿಸಿದರು. ವ್ಯಕ್ತಿಯಿಂದ ಸಮಷ್ಟಿಯವರೆಗೆ ಆವರಿಸುವ ವರ್ತುಲಾಕಾರದ ಸಮಾನತೆಯ ಸಮಾಜದ ವಿಚಾರವನ್ನು ಸಹ ಇಟ್ಟರು.

ಗಾಂಧೀಜಿಯವರ ವಿಚಾರದಿಂದ ಪ್ರಭಾವಿತರಾಗಿದ್ದ ಲೋಕನಾಯಕ ಹಾಗೂ ಸಮಾಜವಾದಿ ಜಯಪ್ರಕಾಶ ನಾರಾಯಣರು ಸಹ ಅಡಿಯಲ್ಲಿ ವಿಸ್ತಾರವಾಗಿದ್ದು ಮೇಲೆ ಮಾತ್ರ ತುದಿಯಿರುವ ಪಿರಾಮಿಡ್ ರೀತಿಯ ಸಮಾಜದ ಕಲ್ಪನೆಯನ್ನು ಇಟ್ಟಿದ್ದರು. ಇದರ ಪ್ರಕಾರ ನಿಜವಾದ ಅಧಿಕಾರ

ಹಳ್ಳಿಗಳಲ್ಲಿ; ದಿಲ್ಲಿ ನೆಪಮಾತ್ರಕ್ಕೆ ಅಧಿಕಾರದ ಕೇಂದ್ರ. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದೊಡನೆಯೇ ಅಂಬೇಡ್ಕರ್ ಹೇಳಿದಂತೆ ರಾಜಕಾರಣಿಗಳು ಅಧಿಕಾರಕ್ಕೆ ಮುಗಿಬಿದ್ದರೇ ಹೊರತು ಸಂವಿಧಾನದ ಪಾವಿತ್ರ್ಯತೆಯನ್ನೂ, ಪ್ರಜಾರಾಜ್ಯದ ಜವಾಬ್ದಾರಿಗಳನ್ನೂ ಜನತೆಗೆ ತಿಳಿಸುವ, ಕಲಿಸುವ ಪ್ರಯತ್ನ ಮಾಡಲೇ ಇಲ್ಲ.

ಅರ್ಧಶತಮಾನದಷ್ಟು ಕಾಲ ನಡೆದು ಬಂದ ನಮ್ಮ ಗಣರಾಜ್ಯದ ಸಂವಿಧಾನ ಭಾರತೀಯರ ತೀಕ್ಷ್ಣ ವಿಮರ್ಶೆಗೆ ಒಳಗಾಗುವ ಕಾಲ ಬಂದಿದೆ. ಈಗಾಗಲೇ ಕೇಂದ್ರ ಸರ್ಕಾರವು ನ್ಯಾಯಮೂರ್ತಿ ಎಮ್.ಎನ್.ವೆಂಕಟಾಚಲಯ್ಯನವರ ನೇತೃತ್ವದಲ್ಲಿ ೧೩ ಸದಸ್ಯರ ಸಂವಿಧಾನ ಪರಿಶೀಲನಾ ಸಮಿತಿಯನ್ನು ನೇಮಿಸಿದೆ. ಈ ಸಮಿತಿ ಎರಡು ವರ್ಷಗಳ ಪರಾಮರ್ಶೆಯ ನಂತರ ಸುಮಾರು ೧೯೭೬ ಪುಟಗಳ ಸುದೀರ್ಘ ವರದಿಯನ್ನು ಕಳೆದ ೨೦೦೨ ನೇ ಇಸ್ವಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿದೆ. ಈ ವರದಿಯು ಅನೇಕ ಗಂಭೀರಸ್ವರೂಪದ ಸಂವಿಧಾನ ತಿದ್ದುಪಡಿಗಳಿಗಾಗಿ ಶಿಫಾರಸು ಮಾಡಿದೆ. ಸಂವಿಧಾನದ ಪುನರ್ ಪರಿಶೀಲನೆ ಅಗತ್ಯವಿತ್ತೇ ಎಂಬುದು ವಿವಾದಾಸ್ಪದವಾಗಿದೆ. ಆದರೆ ಈಗ ಬಂದಿರುವ ವರದಿಯ ಬಗ್ಗೆ ಜನಸಾಮಾನ್ಯರಿಗೆ, ಜನತಾಪ್ರತಿನಿಧಿಗಳಿಗೆ, ಕಾನೂನು ತಜ್ಞರಿಗೆ, ಬುದ್ಧಿಜೀವಿಗಳಿಗೆ ಹೆಚ್ಚಾಗಿ ತಿಳಿಯದೇ ಇರುವುದು, ತಿದ್ದುಪಡಿಗಳ ಸಲಹೆಗಳ ಬಗ್ಗೆ ಯಾವ ಸಾರ್ವಜನಿಕ ಚರ್ಚೆ, ವಿಚಾರ ಗೋಷ್ಠಿಗಳು ನಡೆಯದೇ ಇರುವುದು ವಿಷಾದದ ಸಂಗತಿ.

ಈ ೫೩ ವರ್ಷಗಳ ಅವಧಿಯಲ್ಲಿ ಇನ್ನಿತರ ಪ್ರಮುಖ ಬೆಳವಣಿಗೆಗಳೆಂದರೆ ನಮ್ಮ ಗಣರಾಜ್ಯ ಮತ್ತು ಪ್ರಜಾರಾಜ್ಯದ ಮುಖ್ಯಸಂಸ್ಥೆಗಳಾದ ಲೋಕಸಭೆ ಮತ್ತು ಇತರ ಶಾಸನ ಸಭೆಗಳಲ್ಲಿಯ ಚರ್ಚೆ ಹಾಗೂ ಸದಸ್ಯರ ನಡುವಳಿಕೆಯ ಗುಣಮಟ್ಟ ಬಹಳವಾಗಿ ಕುಸಿದಿರುವುದು. ಇದರಿಂದಾಗಿ ದಂಡಿದಂಡಿಯಾಗಿ ಕಳಪೆ ಶಾಸನಗಳ ರಚನೆಯಾಗುತ್ತಿದೆ. ಇದರ ಫಲವಾಗಿ ನ್ಯಾಯಾಂಗ ಬಲಗೊಳ್ಳುತ್ತಿದೆ. ನಾಯಾಂಗ ತೃತೀಯ ಸದನದಂತೆ ಕೆಲಸ ಮಾಡುವಷ್ಟರ ಮಟ್ಟಿಗೆ ತನ್ನ ಪ್ರಭಾವ ಹೆಚ್ಚಿಸಿಕೊಂಡಿದೆ.

ರಾಜಕಿಯ ಲಾಭಾಲಾಭಗಳ ದೃಷ್ಟಿಯನ್ನಿಟ್ಟು ಕೊಂಡು ಸಂವಿಧಾನ ಸೂಚಿತ ಐದು ವರ್ಷಗಳ ಅವಧಿಗೆ ಮುಂಚಿತವಾಗಿಯೇ ಚುನಾವಣೆಗಳನ್ನು

ನಡೆಸುವುದು ಎಷ್ಟು ಸಮಂಜಸ ಎಂಬುದನ್ನು ಜನತೆ ಆಲೋಚಿಸಬೇಕು. ಚಂದ್ರಬಾಬುನಾಯ್ಡು ತಾವು ಹತ್ಯೆಗೆ ಗುರಿಯಾದ್ದುದರ ಪರಿಣಮವಾಗಿ ಆಂಧ್ರ ಪ್ರದೇಶದಲ್ಲಿ ತಮ್ಮ ಬಗ್ಗೆ ಉಂಟಾಗಿರುವ ಸಹಾನುಭೂತಿಯನ್ನೇ ಬಂಡವಾಳವನ್ನಾಗಿಸಿಕೊಳ್ಳಲು ತಮ್ಮ ರಾಜ್ಯದ ಶಾಸನಸಭೆಗಳನ್ನು ವಿಸರ್ಜಿಸಿ ಚುನಾವಣೆ ಏರ್ಪಡಿಸುವಂತೆ ಚುನಾವಣಾ ಆಯೋಗದ ಮೇಲೆ ಒತ್ತಡ ತರುತ್ತಿದ್ದಾರೆ. ಹೀಗೆ ಅವಧಿಗೆ ಮುಂಚಿತವಾಗಿಯೇ ಚುನಾವಣೆಗಳನ್ನು ನಡೆಸುವುದು ಸಂವಿಧಾನದ ಮತ್ತು ಪ್ರಜಾರಾಜ್ಯದ ವಿಡಂಬನೆಯಾಗಿದೆ. ಪ್ರತಿಯೊಂದು ಮಹಾಚುನಾವಣೆಯೂ ೧೦೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಖರ್ಚನ್ನು ಕೇಳುತ್ತದೆ. ದೇಶದಲ್ಲಿ ಅಗಾಧವಾದ ಬಡತನ ಮತ್ತು ಇನ್ನಿತರ ತೀವ್ರ ಸ್ವರೂಪದ ಸಮಸ್ಯೆಗಳಿರುವಾಗ ಇಷ್ಟು ಹಣವನ್ನು ಪ್ರಜಾರಾಜ್ಯದ ಹೆಸರಿನಲ್ಲಿ ಮತ್ತು ಸಂವಿಧಾನದ ಹೆಸರಿನಲ್ಲಿ ಖರ್ಚು ಮಾಡುವುದು ಎಷ್ಟು ಸರಿ ಎಂಬುದನ್ನು ಸಹ ಆಲೋಚಿಸಬೇಕಿದೆ.

ಈ ೫೩ ವರ್ಷಗಳಲ್ಲಿ ನಮ್ಮ ಗಣರಾಜ್ಯ ಅಪಾಯದ ಅಂಚಿಗೆ ಬಂದು ನಿಂತಿದೆ. ಟಾಲಸ್ಟಾಯ್ ತಮ್ಮ (Slavery Of Our Times)ನಮ್ಮ ಕಾಲದ ಗುಲಾಮಗಿರಿ ಎಂಬ ಪುಸ್ತಕದಲ್ಲಿ ಹೇಳಿರುವಂತೆ ಸ್ವಾತಂತ್ರ್ಯ ಬರುವುದು ಹೆಸರಿಗೆ ಮಾತ್ರ ಅಂದರೆ ಹಳೆಯ ಗುಲಾಮಗಿರಿ ಹೋಯಿತು, ಸ್ವಾತಂತ್ರ್ಯದ ಹೆಸರಿನಲ್ಲಿ ಹೊಸ ಗುಲಾಮಗಿರಿ ಬಂದಿತು ಎಂಬಂಥ ಪರಿಸ್ಥಿತಿ ನಮ್ಮ ದೇಶಕ್ಕೆ ಬರುತ್ತಿದೆಯೇನೋ ಎಂಬ ಭೀತಿ ಉಂಟಾಗುತ್ತಿದೆ.

ಡಾ॥ ಅಂಬೇಡ್ಕರ್ ರಚಿಸಿದ ಸಂವಿಧಾನದ ಆಶಯ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆ. ಅದೇ ರೀತಿ ಗಾಧೀಜಿಯವರ ಪ್ರಜಾರಾಜ್ಯ ಸತ್ಯದ ಒಂದು ಅಂಶ. ೫೩ ನೇ ಗಣರಾಜ್ಯ ತನ್ನ ದಾರಿಯಲ್ಲಿ ಎಷ್ಟು ದೂರ ನಡೆದು ಬಂದಿದೆ ಮತ್ತು ಇನ್ನೂ ಅದು ಕ್ರಮಿಸ ಬೇಕಾದ ದಾರಿ ಎಷ್ಟಿದೆ ಎಂಬುದನ್ನು ತೋರಿಸಲು ಡಾ॥ ಅಂಬೇಡ್ಕರ್ ಮತ್ತು ಮಹಾತ್ಮಾ ಗಾಂಧೀಜಿಯವರ ಆಶಯಗಳೇ ಮೈಲುಗಲ್ಲುಗಳಾಗಿವೆ. ಹೊಸ ಭಾರತದ ನಿರ್ಮಾಣಕ್ಕೆ ಅವರೀರ್ವರ ವಿಚಾರಗಳ ಸಮನ್ವಯತೆ ಹೊಸ ಭಾರತ ನಿರ್ಮಾಣದ ಮನ್ವತಂರಕ್ಕೆ ಕಾರಣವಾಗಲಿ.

* * * *

ಪ್ರಜಾಪ್ರಭುತ್ವ ಮತ್ತು ವಯಸ್ಕ ಮತದಾನ

-ಆರ್.ಜಿ. ಸುಬ್ರಮಣ್ಯಂ

ಜರ್ಮನ್ ದೇಶದ ತತ್ವಜ್ಞಾನಿ ಫೆಡ್ರಿಕ್ ನಿಟ್ಸ್‌ಜಿ(Nietzsche) ಹೀಗೆ ಹೇಳಿದ್ದಾರೆ: ಪ್ರಜಾಪ್ರಭುತ್ವವೆಂದರೆ ಸಾಧಾರಣ ವ್ಯಕ್ತಿಗಳ ಪೂಜೆ ಮತ್ತು ಶ್ರೇಷ್ಠತೆಯ ತಿರಸ್ಕಾರ. ಅಂದರೆ ಶ್ರೇಷ್ಠರ ನಿಃಸಹಾಯಕತೆ ಹಾಗೂ ಚುನಾವಣೆಯಲ್ಲಿ ಆಗುವ ಅವಮಾನಗಳಿಗೆ ಮತ್ತು ಅಸಭ್ಯ ವರ್ತನೆಗಳಿಗೆ ಶರಣಾಗುವುದು. ಕಳೆದ ೫೦ ಅಥವಾ ಹೆಚ್ಚು ವರ್ಷಗಳಿಂದ ನಾವು ಪ್ರಜಾಪ್ರಭುತ್ವವನ್ನು ನೋಡಿದ್ದೇವೆ. ಸಾಧಾರಣವಾಗಿ ಅಧಿಕಾರದ ನೇತೃತ್ವವನ್ನು ಅಯೋಗ್ಯರ ಗುಂಪು ಹಿಡಿದಿದೆ. ಈ ಜನರು ಮತದಾರರೆಂಬ ಸಮ್ಮಿಶ್ರ ರೀತಿಯ ಜನಸಮೂಹದಿಂದ ಆರಿಸಲ್ಪಟ್ಟಿದ್ದಾರೆ. ಈ ಮತದಾರರು ತಾವು ಯಾರಿಗೆ ಮತ ಚಲಾಯಿಸುತ್ತಾರೋ ಅವರ ಯೋಗ್ಯತೆಯ ಬಗ್ಗೆ ಅರಾಮಾಗಿ ಅಜ್ಞಾನಿಗಳಾಗಿದ್ದಾರೆ. ೧೯೪೭ ರಲ್ಲಿ ಆಗಿನ ಇಂಗ್ಲೆಂಡಿನ ಪ್ರಧಾನಿಯಾಗಿದ್ದ ವಿನ್‌ಸ್ಟನ್ ಚರ್ಚಿಲ್ ಅಲ್ಲಿಯ ಸಾಮಾನ್ಯರ ಸಭೆಯಲ್ಲಿ (House of Commonsನಲ್ಲಿ) ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಮಸೂದೆಯನ್ನು ವಿರೋಧಿಸುತ್ತಾ ಹೇಳಿದ ಮಾತನ್ನು ಇಲ್ಲಿ ಸ್ಮರಿಸುವುದು ಅಪ್ರಸ್ತುತವಾಗಲಾರದು. ಕಾಂಗ್ರೆಸ್‌ಗೆ ಆಡಳಿತ ಸೂತ್ರವನ್ನು ವಹಿಸಿಕೊಡುವುದೆಂದರೆ ಹಸಿದು ಕಂಗಾಲಾಗಿರುವ ಕೋಟ್ಯಾಂತರ ಜನರ ಭವಿಷ್ಯವನ್ನು ಕಳ್ಳ ಮತ್ತು ದಗಾಕೋರರ ಕೈಗೆ ಕೊಟ್ಟಂತೆ! ೧೯೫೦ ರಲ್ಲಿ ನಾವು ಭಾರತದ ಸಂವಿಧಾನವನ್ನು ಅಂಗೀಕರಿಸಿದೆವು. ಆ ಸಂವಿಧಾನದಲ್ಲಿ ಇತರ ಅನೇಕ ಸೌಲಭ್ಯಗಳೊಂದಿಗೆ ವಯಸ್ಕ ಮತದಾನ ಮತ್ತು ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯನ್ನು ಪಡೆದುಕೊಂಡವು. ಕಳೆದ ೫೦ ವರ್ಷಗಳ ನಮ್ಮ ಪ್ರಜಾಪ್ರಭುತ್ವದ ದಾಖಲೆ ಯಾವ ರೀತಿಯಲ್ಲೂ ಉತ್ಸಾಹದಾಯಕವಾಗಿಲ್ಲ. ಈ ಸಂಗತಿಯು ನಮಗೆ ೨೦೦೩ ನೇ ಇಸವಿಯ UNDPಯ ಮಾನವ ಅಭಿವೃದ್ಧಿ ವರದಿಯಿಂದ ತಿಳಿಯುತ್ತದೆ. ಆ ವರದಿಯ ಮೇರೆಗೆ ನಮ್ಮ ಜನಸಂಖ್ಯೆಯ ೧೦೦ಕ್ಕೆ ೩೫ ರಷ್ಟು ಜನರು ದಿನ ಒಂದಕ್ಕೆ ೧೦ ರೂಪಾಯಿಗಳಿಗಿಂತಲೂ ಕಡಿಮೆ ಸಂಪಾದಿಸುತ್ತಾರೆ. ಪ್ರಪಂಚದಲ್ಲಿಯೇ ಹಸಿದ ಜನತೆಯ ಅತ್ಯಂತ ದೊಡ್ಡ ಸಂಖ್ಯೆ ಹೊಂದಿರುವ ದೇಶ ಭಾರತವೆಂದು ಕೆಟ್ಟ ಹೆಸರು ಪಡೆದಿದೆ. ಅಂದರೆ ಭಾರತದಲ್ಲಿ ೨೩ ಕೋಟಿ ೩೦ ಲಕ್ಷದಷ್ಟು ಹಸಿದ ಜನರಿದ್ದಾರೆ ಎಂದು ಅಂದಾಜಿಸಲಾಗಿದೆ.

ನಮ್ಮ ದೇಶವು ಮಾಡಿದ ಸಾಧನೆಯ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನು ಗಮನಿಸೋಣ.

ಸಕಾರಾತ್ಮಕ ಅಂಶಗಳು

೧) ನಾವು ಬಹುದೊಡ್ಡ ವೈಜ್ಞಾನಿಕರ ಸಮೂಹವನ್ನು ಹೊಂದಿದ್ದೇವೆ.

೨) ಎರಡು–ಮೂರು ವರ್ಷ ಬರಗಾಲವನ್ನು ಎದುರಿಸಲು ಸಾಧ್ಯವಾಗ ಬಹುದಾದಷ್ಟು ಧಾನ್ಯ ಸಂಗ್ರಹ ಹೊಂದಿದ್ದೇವೆ.

೩) ಅಂತರಿಕ್ಷ ಮತ್ತು ಕ್ಷಿಪಣಿ ತಂತ್ರಜ್ಞಾನ, ನ್ಯೂಕ್ಲಿಯರ್ ವಿಜ್ಞಾನ, ಮಾಹಿತಿ ತಂತ್ರಜ್ಞಾನ, ವಾಣಿಜ್ಯ ಮತ್ತು ಕೈಗಾರಿಕೆ, ಜಲಸಂಪನ್ಮೂಲಗಳ ಅಭಿವೃದ್ಧಿ ಮತ್ತು ನೀರಾವರಿ ಈ ಮುಂತಾದ ಕ್ಷೇತ್ರಗಳಲ್ಲಿ ಬಹುದೊಡ್ಡ ಪ್ರಗತಿಯನ್ನು ಸಾಧಿಸಿದ್ದೇವೆ.

೪) ವಿದೇಶಿ ಮುದ್ರೆಯ ಸಂಗ್ರಹ ಹೊಸದಾಖಲೆಯನ್ನು ಸಾಧಿಸಿದೆ.

ನಕಾರರ್ಮಕ ಅಂಶಗಳು

೧) ಅನಿರ್ಬಂಧಿತ ಜನಸಂಖ್ಯಾ ಬೆಳವಣಿಗೆ ವಿಶ್ವದ ಭೂವಿಸ್ತಾರದಲ್ಲಿ ಶೇ ೨.೪ ರಷ್ಟು ವಿಸ್ತಾರವನ್ನು ಹೊಂದಿರುವ ನಮ್ಮ ದೇಶವು ವಿಶ್ವದ ಜನಸಂಖ್ಯೆಯ ಶೇ ೧೬ ರಷ್ಟುನ್ನು ಹೊಂದಿದೆ.

೨) ಶಿಕ್ಷಣ ಮತ್ತು ಪ್ರಾಥಮಿಕ ಆರೋಗ್ಯ ಸೇವೆಗಳು ಇನ್ನೂ ಗ್ರಾಮೀಣ ಜನರನ್ನು ತಲುಪಬೇಕಾಗಿದೆ.

೩) ಬಡತನ ಮತ್ತು ಹಸಿವೆಯ ನಿರ್ಮೂಲನೆ ಇತ್ಯಾದಿ ವಿಷಯಗಳು ಚುನಾವಣೆಯಲ್ಲಿ ಮತಪಡೆಯುವುದಕ್ಕಾಗಿ ಉಪಯೋಗಿಸುವ ಘೋಷಣೆಗಳಾಗಿವೆ.

೪) ಹಳ್ಳಿಗಳನ್ನು ಬಲಿಗೊಟ್ಟು ಬೃಹತ್ ನಗರಗಳು ಮತ್ತು ದೊಡ್ಡಷಹರುಗಳು ಅನುಪಾತರಹಿತವಾಗಿ ಬೆಳೆದಿವೆ. ಹಳ್ಳಿಗಳು ಒಂದಲ್ಲ ಒಂದು ವಸ್ತುವಿನ ಅಭಾವದಲ್ಲಿ ನರಳುತ್ತಿವೆ.

೫) ಉದ್ಯೋಗಗಳನ್ನು ಹುಡುಕಿಕೊಂಡು ನಗರಗಳಿಗೆ ಜನರು ವಲಸೆ ಹೊಗುತ್ತಿರುವುದರಿಂದ ನಗರಗಳಲ್ಲಿ ಕೊಚ್ಚೆ ಪ್ರದೇಶಗಳ ಸಂಖ್ಯೆ ಗಣನೀಯವಾಗಿ ಬೆಳೆದಿದೆ.

೬) ರಾಜಕಾರಣಿಗಳು ಮತ್ತು ಅಧಿಕಾರಿಗಳು ಅತಿಯಾಗಿ ಭ್ರಷ್ಟರಾಗಿದ್ದಾರೆ. ಭ್ರಷ್ಟಾಚಾರ ಜೀವನದ ಎಲ್ಲಹಂತಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಬೆಳೆದಿದೆ. ಜವಾನನಿಂದ ರಾಜಕಾರಣಿ ಯವರೆಗೆ ಎಲ್ಲರೂ ಭ್ರಷ್ಟರಾಗಿದ್ದಾರೆ.

೭) ಸಾಮಾನ್ಯ ಜನರ ಜೀವನ ಮತ್ತು ಆಸ್ತಿಯ ಸುರಕ್ಷತೆಗೆ ಅಪಾಯವುಂಟಾಗಿದೆ.

೮) ರಾಜಕಿಯನಾಯಕತ್ವದ ವಿಫಲತೆಯಾಗಿದೆ.

ವಿಷಯದ ಜ್ಞಾನವೇ ಇಲ್ಲದಂಥವರು ಅಧಿಕಾರದ ಸೂತ್ರವನ್ನು ಹಿಡಿದಿದ್ದಾರೆ. ತೀರ್ಮಾನವನ್ನು ಕೈಗೊಳ್ಳುವಂತಹ ಮಂತ್ರಿಯು ತನಗೆ ಬೇಕಾದ ಮಾಹಿತಿಯನ್ನು ಎಲ್ಲವನ್ನೂ ಬಲ್ಲವನೆಂದು ನಟಿಸುವಂತಹ ವ್ಯಕ್ತಿಯಿಂದ ಮಾಹಿತಿಯನ್ನು ಪಡೆಯುತ್ತಾನೆ. ಎಲ್ಲವನ್ನು ಬಲ್ಲಂಥವನಿಗೆ ಹೆಚ್ಚಿನ ವಿಚಾರಗಳ ಬಗ್ಗೆ ಬಹಳ ಕಡಿಮೆ ತಿಳುವಳಿಕೆಯಿರುತ್ತದೆ. ಜ್ಞಾನ ಒಂದು ಶಕ್ತಿ ಎಂಬುದಾಗಿ ಹೇಳಲಾಗುತ್ತದೆ. ಆದರೆ ಇಲ್ಲಿ ಜ್ಞಾನವಿಲ್ಲದೆ ಅಧಿಕಾರವಿದೆ!

ಯಾವ ರೀತಿ ಮನುಷ್ಯನೋ ಆರೀತಿ ರಾಜ್ಯ ಎಂದು ಪ್ಲೆಟೊ ಹೇಳಿದ. ಪ್ರಜಾಪ್ರಭುತ್ವದಲ್ಲಿ ಯಥಾ ಪ್ರಜಾ ತಥಾ ರಾಜ. ಮೂಗನು ಆದ ಮತದಾರನು ಸುಣ್ಣದನೀರು ಮತ್ತು ಹಾಲಿನ ಮಧ್ಯೆ ವ್ಯತ್ಯಾಸವನ್ನು ಅರಿಯಲಾರ ಆದ್ದರಿಂದ ಯಾರು ಜಾತಿಯ ಆಧಾರದಮೇಲೆ, ಭುಜಬಲದ ಆಧಾರದ ಮೇಲೆ ಅಥವಾ ಹಣದ ಬಲದ ಮೇಲೆ ಮತವನ್ನು ಯಾಚಿಸುವಂಥವರನ್ನು ಆಯ್ಕೆ ಮಾಡುತ್ತಾನೆ. ಆದ್ದರಿಂದ ಚುನಾವಣಾ ಸಮಯದಲ್ಲಿ ಹಸಿದಂಥವರು ಮನೆಯಿಲ್ಲದಂಥವರು, ದೀನರಾಗಿರುವಂಥವರು, ರಾಜಕಿಯಪಕ್ಷಗಳಿಂದ ದುರುಪಯೋಗಕ್ಕೆ ಒಳಪಡುತ್ತಾರೆ. ನಮ್ಮ ಗೌರವಾನ್ವಿತ ಶಾಸನಸಭೆಗಳಲ್ಲಿ ಮತ್ತು ಲೋಕಸಭೆಯಲ್ಲಿ ಶೇ ೩೫ ರಷ್ಟು ಸದಸ್ಯರು ಅಪರಾಧಿಗಳಾಗಿರುತ್ತಾರೆ. ಅವರಲ್ಲಿ ಬಹುಸಂಖ್ಯಾತರ ವಿದ್ಯಾರ್ಜನೆ ೧೦ನೇ ತರಗತಿಯವರೆಗೆ ಅಥವಾ ಇನ್ನೂ ಕೆಳಗಿನ ಹಂತದವರೆಗೆ ಇರುತ್ತದೆ. ಇನ್ನು ಕೆಲವರು ನಿರಕ್ಷರಸ್ಥರಾಗಿದ್ದಾರೆ. ನಮ್ಮ ಶಾಸನ ಸಭೆಗಳಲ್ಲಿ ಮತ್ತು ಸಂಸತ್ತಿನಲ್ಲಿ ಸದಸ್ಯರು ಹೊಡೆದಾಡುತ್ತಾರೆ. ಅವಾಚ್ಯ ಶಬ್ದಗಳನ್ನು ಉಪಯೋಗಿಸುತ್ತಾರೆ, ಧರಣಿ ಮಾಡುತ್ತಾರೆ, ಪದಾರ್ಥಗಳನ್ನು ಎಸೆದಾಡುತ್ತಾರೆ. ಸಭಾಧ್ಯಕ್ಷರ

ಮಾತಿಗೆ ಗೌರವ ಕೊಡುವುದಿಲ್ಲ. ಇತ್ಯಾದಿ ವರ್ತನೆಗಳನ್ನು ನೋಡಿದರೆ ನಮ್ಮ ಜನತಾ ಪ್ರತಿನಿಧಿಗಳು ಸಮರ್ಥರಲ್ಲವೆಂಬುದನ್ನು ಮತ್ತು ಅವರನ್ನು ಆಯ್ಕೆಮಾಡಿದ ಜನರು ಯೋಗ್ಯತೆಯುಳ್ಳವರಲ್ಲವೆಂದು ಗೊತ್ತಾಗುತ್ತದೆ.

ವಯಸ್ಕ ಮತದಾನಪದ್ಧತಿ ಸರಿಯಾದುದೆಂಬುದೇನೋ ಸರಿ, ಆದರೆ ಈ ಮಾತು ಯಾವ ದೇಶದ ಜನ ಒಳ್ಳೆಯ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ ಮತ್ತು ಒಳ್ಳೆಯ ತಿಳುವಳಿಕೆಯನ್ನು ಹೊಂದಿದ್ದಾರೆ ಅಂತಹ ದೇಶಗಳಿಗೆ ಅನ್ವಯಿಸುತ್ತದೆ. ಇಂದಿನ ರಾಜ್ಯ ಪದ್ಧತಿಯನ್ನು ಬಹಳವಾಗಿ ಬದಲಾಯಿಸದೆ ಶಾಸಕಾಂಗದ ಗುಣಮಟ್ಟವನ್ನು ಉನ್ನತಪಡಿಸಬಹುದು. ಹಾಗೆ ಮಾಡಬೇಕಾದರೆ ಮತದಾನದ ಹಕ್ಕನ್ನು ಶಿಕ್ಷಿತ ವರ್ಗಕ್ಕೆ ಸೀಮೀತಗೊಳಿಸಬೇಕು. ಅರಿಸ್ಟಾಟಲ್ ಸಹ ಈ ಮಾತನ್ನೇ ಹೇಳಿದ್ದಾನೆ. ಮತದಾನ ಹಕ್ಕು ಬುದ್ಧಿವಂತರಿಗೆ ಸೀಮಿತಗೊಳ್ಳಬೇಕು

ಮತದಾರನು ೧೦ನೇ ತರಗತಿಯನ್ನಾದರೂ ತೇರ್ಗಡೆಯಾಗಿರಬೇಕು. ಅಭ್ಯರ್ಥಿಗಳು ಪದವಿಧರರಾಗಿರಬೇಕು. ನಾಯಿ ಕೊಡೆಗಳಂತೆ ಹುಟ್ಟುವ ರಾಜಕಿಯಪಕ್ಷಗಳಿಗೆ ಕಡಿವಾಣ ಹಾಕಬೇಕು. ಹಿಂದಿನ ವರ್ಷ ಶೇ ೧೦ಕ್ಕೂ ಕಡಿಮೆ ಸ್ಥಾನಗಳನ್ನು ಪಡೆದಂತಹ ರಾಜಕಿಯಪಕ್ಷಗಳ ಮಾನ್ಯತೆಯನ್ನು ಚುನಾವಣಾ ಆಯೋಗ ರದ್ದುಗೊಳಿಸಬೇಕು. ಮತ್ತು ಇತರ ಎಲ್ಲಒಳ್ಳೆಯ ಸಲಹೆಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುವಂತೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕು. ದೃಢನಿರ್ಧಾರದ ದೇಶ ಇದನ್ನು ಮಾಡಬಹುದು. ಆದಾಗ್ಯೂ ನಮ್ಮ ನಾಯಕರಲ್ಲಿ ಇದಕ್ಕೆ ಅಗತ್ಯವಾದ ದೇಶಾಭಿಮಾನ ಮತ್ತು ರಾಜಕಿಯ ಮನೋಭಿಲಾಷೆ ಇದೆಯೆ?

ಅನು: ಸು.ಕೌ.

(ಡೆಕ್ಕನ್ ಹೆರಾಲ್ಡ ಸಾಭಾರ)

****

ರಾಜಕಾರಣಿಗಳ ನಿಜರೂಪ

–ಓ.ಪಿ ವರ್ಮ

ಜನತಾ ಪ್ರತಿನಿಧಿ ಕಾನೂನಿಗೆ ಸಂಬಂಧಿಸಿದ ತಿದ್ದುಪಡಿಯನ್ನು ಸರ್ವೋಚ್ಚ ನ್ಯಾಯಾಲಯ ತಿರಸ್ಕರಿಸಿರುವುದರಿಂದ ರಾಜಕಾರಣದ ಅಪರಾಧೀಕರಣ ಪುನಃ ಪ್ರಚಲಿತ ವಿಷಯವಾಗಿದೆ.

೨೦೦೩ ಮಾರ್ಚ್ ೧೩ ರಂದು ಸರ್ವೋಚ್ಚ ನ್ಯಾಯಾಲಯ ಜನತಾ ಪ್ರತಿನಿಧಿ ಕಾಯ್ದೆಗೆ ಸಂಬಂಧಿಸಿದ ತಿದ್ದುಪಡಿಯನ್ನು ತಳ್ಳಿಹಾಕಿರುವುದರಿಂದ ರಾಜಕಾರಣದ ಅಪರಾಧೀಕರಣದ ವಿಷಯ ಚರ್ಚೆಯ ಕೇಂದ್ರ ವಿಷಯವಾಗಿದೆ. ಅಲ್ಲದೆ, ಅದು ಅನೇಕ ಬಗೆಯ ಸಂವಿಧಾನಾತ್ಮಕ ಮತ್ತು ರಾಜಕಿಯ ವಿಷಯಗಳನ್ನು ಮೇಲಕ್ಕೆತ್ತಿದೆ. ನ್ಯಾಯಾಂಗದ ಮತ್ತು ಕಾರ್ಯಾಂಗದ ಅಭಿಪ್ರಾಯಗಳನ್ನು ಸರಿಯಾಗಿ ವಿಂಗಡಿಸದೆ ಇದ್ದಲ್ಲಿ ಅವೆರಡು ಪರಸ್ಪರ ಸಂಘರ್ಷಕ್ಕೆ ಇಳಿಯುವ ಸಾಧ್ಯತೆ ಇದೆ. ಚುನಾವಣೆಗಳು ಸನಿಹದಲ್ಲೇ ಇರುವುದರಿಂದ ಇಡೀ ವಿಷಯ ವಿವಾದತ್ಮಾಕವಾಗುವುದಲ್ಲದೆ ಅದಕ್ಕೆ ವಿಶೇಷ ಮಹತ್ವವು ಬರುತ್ತದೆ. ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನ ಮೇರೆಗೆ ೨೦೦೨ ಮೇ ೧೨ ರ ತನ್ನ ಆದೇಶವನ್ನು ಚಾಲನೆಗೆ ಕೊಟ್ಟಿದೆ. ಈ ಆದೇಶದ ಪ್ರಕಾರ ಚುನಾವಣಾ ಆಯೋಗ ಮಾರ್ಗದರ್ಶಿ ಸೂಚನೆಗಳನ್ನು ಪ್ರಕಟಿಸಿತು. ಆ ಮಾರ್ಗದರ್ಶಿ ಸೂಚನೆಗಳ ಪ್ರಕಾರ ಚುನಾವಣಾ ಅಭ್ಯರ್ಥಿಗಳು ತಾವು ಮಾಡಿದ ಅಪರಾಧಗಳನ್ನು ಮತ್ತು ತಮ್ಮ ಹಾಗೂ ತಮ್ಮ ಸಂಬಂಧಿಗಳ ಆಸ್ತಿಪಾಸ್ತಿಗಳ ವಿವರಗಳನ್ನು ಹಾಗೂ ತಮ್ಮ ವಿದ್ಯಾರ್ಹತೆಯನ್ನು ನಾಮಪತ್ರ ಸಲ್ಲಿಸುವ ಸಮಯದಲ್ಲಿ ತಿಳಿಸುವುದು ಕಾನೂನಿನ್ವಯ ಕಡ್ಡಾಯವಾಗಿತ್ತು. ಚುನಾವಣಾ ಆಯೋಗದ ಈ ಉಪಕ್ರಮವು ಸಾಮಾನ್ಯವಾಗಿ ಎಲ್ಲರಿಂದ ಸ್ವಾಗತಿಸಲ್ಪಟ್ಟಿತು. ಆದರೆ ಇದು ರಾಜಕಿಯಪಕ್ಷಗಳಿಗೆ ಸಮ್ಮತವಾಗಲಿಲ್ಲ. ಎಸ್.ಎಸ್.ಎಲ್.ಸಿ ಅಥವಾ ಅಲ್ಲಿಯವರೆಗೆ ಮಾತ್ರ ಓದಿದ ಕೆಲವು ಹಿರಿಯ ನಾಯಕರು ತಮ್ಮ ಶೈಕ್ಷಣಿಕ ಸಾಧನೆಯನ್ನು ಬಹಿರಂಗಪಡಿಸಲು ಇಷ್ಟ ಪಡಲಿಲ್ಲ. ಇದಕ್ಕೆ ಅವರು ಕೊಟ್ಟ ಕಾರಣವೇನೆಂದರೆ ತಮ್ಮ ಜೀವನದಲ್ಲಿ ಪಡೆದಂತಹ ರಾಜಕಿಯಜ್ಞಾನವು ಯಾವುದೇ ಶಾಲೆ ಅಥವಾ ಕಾಲೇಜಿನ ಶೈಕ್ಷಣಿಕ ಪ್ರಮಾಣಪತ್ರಗಳಿಗಿಂತ ಹೆಚ್ಚು ಬೆಲೆಯುಳ್ಳದ್ದು. ಇದೇ ರೀತಿ ರಾಜಕಿಯಪಕ್ಷಗಳು ಆಸ್ತಿ–ಪಾಸ್ತಿಗಳ ಘೋಷಣೆ ಮತ್ತು ಅಪರಾಧೀಕರಣದ ವಿವರ ಇತ್ಯಾದಿಗಳನ್ನು

ಬಹಿರಂಗಪಡಿಸಬೇಕೆಂಬ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ರಾಜಕೀಯಪಕ್ಷಗಳು ನಿರರ್ಥಕಗೊಳಿಸಿದವು.

ಮೊದಲು ಒಂದು ಆದೇಶವನ್ನು ಹೊರಡಿಸಲಾಯಿತು. ನಂತರ ಒಂದು ಕಾನೂನಿನ ಮೂಲಕ ಆ ಆದೇಶವನ್ನು ಬುಡಮೇಲು ಮಾಡಲಾಯಿತು. ಆ ಮಸೂದೆ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಬಳಿ ಸಮ್ಮತಿಯ ಹಸ್ತಾಕ್ಷರಕ್ಕೆ ಹೋದಾಗ ಅದನ್ನು ಅವರು ಮರು ಆಲೋಚನೆಗಾಗಿ ಹಿಂದಿರುಗಿಸಿದ್ದರು. ಆದರೆ ಅದೇನೂ ಪ್ರಯೋಜನಕ್ಕೆ ಬರಲಿಲ್ಲ. ಆ ಅದೇಶವನ್ನು ಬುಡಮೇಲು ಮಾಡಲು ಪ್ರತಿಪಾದಿಸಲ್ಪಟ್ಟ ರೀತಿ ಈ ರೀತಿಯಾಗಿತ್ತು. ಚುನಾಯಿತ ಪ್ರತಿನಿಧಿಗಳು ತಮ್ಮ ಆಸ್ತಿಯ ವಿವರಗಳನ್ನು ಲೋಕಸಭಾಧ್ಯಕ್ಷರಿಗೆ ಚುನಾಯಿತರಾಗಿ ಬರುವುದಕ್ಕಿಂತ ಮೊದಲು ತಿಳಿಸದೆ ಚುನಾಯಿತರಾದ ಮೇಲೆ ತಿಳಿಸುವುದೆ ಆಗಿತ್ತು. ಪ್ರತಿನಿಧಿಗಳು ಮಾಡಿದ ಯಾವ ಅಪರಾಧಗಳ ಬಗ್ಗೆ ನ್ಯಾಯಾಲಯ ಗಣನೆಗೆ ತೆಗೆದು ಕೊಂಡಿದೆಯೋ ಆ ಅಪರಾಧಗಳನ್ನು ಸಹ ಲೋಕಸಭಾಧ್ಯಕ್ಷರಿಗೆ ತಿಳಿಸಬೇಕೆಂದು ಆ ಜನತಾ ಪ್ರತಿನಿಧಿ ಕಾನೂನು ಕಡ್ಡಾಯ ಗೊಳಿಸಿತ್ತು. ಶೈಕ್ಷಣಿಕ ಸಾಧನೆಗಳನ್ನು ಬಹಿರಂಗ ಗೊಳಿಸಬೇಕೆಂಬ ನಿಯಮವನ್ನು ಸಂಪೂರ್ಣವಾಗಿ ಕೈಬಿಡಲಾಯಿತು. ರಾಜಕಾರಣದಲ್ಲಿರುವ ಹಣ ಮತ್ತು ಭುಜಬಲವನ್ನು ನಿರಶನಗೊಳಿಸುವ ಬಗ್ಗೆ ಇದು ಅರ್ಧ ಮನಸ್ಸಿನ ಪ್ರಯತ್ನವಾಗಿತ್ತು. ಮತ ಚಲಾಯಿಸುವುದು ಹೇಗೆ ಒಂದು ಮೂಲಭೂತ ಹಕ್ಕಾಗಿದಿಯೋ ಅದೇರೀತಿ ಮತದಾರನು ಉಮೇದುವಾರರ ಆಸ್ತಿ ಮತ್ತುವಿದ್ಯಾಭ್ಯಾಸದ ವಿಷಯಗಳನ್ನು ತಿಳಿಯಬೇಕೆಂಬುದೂ ಮೂಲಭೂತ ಹಕ್ಕಾಗಿರುವುದಿಲ್ಲವೆಂದು ಸರ್ಕಾರವು ತನ್ನ ಅಭಿಪ್ರಯವನ್ನು ಮಂಡಿಸಿತು. ಆದರೆ ವಾಕ್ ಸ್ವಾತಂತ್ರ್ಯದ ಒಂದು ಭಾಗವಾಗಿ ಮಾಹಿತಿಯನ್ನು ಪಡೆಯುವುದು ಜನರ ಮೂಲಭೂತ ಹಕ್ಕೆಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ಕೊಟ್ಟಿತು.

ಉಮೇದುವಾರರ ಪೂರ್ವ ಚರಿತ್ರೆಯನ್ನು ಸಾರ್ವಜನಿಕರಿಗೆ ತಿಳಿಯಪಡಿಸುವುದರ ಮೂಲಕ ರಾಜಕೀಯವ್ಯವಸ್ಥೆಯನ್ನು ಅಪರಾಧಿಗಳಿಂದ ದೂರವಿರಿಸಬಹುದು. ಮೂವರು ನ್ಯಾಯಾಧೀಶರುಳ್ಳ ಪೀಠದ ಮುಖ್ಯಸ್ಥರಾಗಿದ್ದ ನ್ಯಾಯಮೂರ್ತಿ ಎಮ್.ಬಿ.ಷಹಾ ಈ ವಿಷಯವಾಗಿ ಹಿಗೆ ಹೇಳಿದ್ದಾರೆ: ಸಾರ್ವಜನಿಕರ ತೀಕ್ಷ್ಣ ದೃಷ್ಟಿಗೆ ಮತ್ತು ಪರೀಕ್ಷೆಗೆ ಒಳಪಡುವ ಕ್ರಮ ನಿಜವಾಗಿಯೂ ನಮ್ಮ ಪ್ರಜಾತಾಂತ್ರಿಕ ಆಡಳಿತ ವ್ಯವಸ್ಥೆಯನ್ನು ಸ್ವಚ್ಛಗೊಳಿಸುವ ಹಾಗೂ ಸುಯೋಗ್ಯವಾದ ಶಾಸಕಾಂಗವನ್ನು ಹೊಂದುವ ಹೆಜ್ಜೆಯಾಗಿದೆ . ಎಮ್.ಬಿ.ಷಹಾರವರಲ್ಲದೆ ಇನ್ನುಳಿದ ನ್ಯಾಯಾಧೀಶರಾದ ಪಿ.ವಿ.ರೆಡ್ಡಿ ಮತ್ತು

ಡಿ.ಎಂ.ಧರ್ಮಾಧಿಕಾರಿ ಮುಂದುವರಿದು ಹೇಳಿದ್ದೇನೆಂದರೆ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿರುವ ಜನರು ಸಾಕಷ್ಟು ಮಾಹಿತಿಯನ್ನು ತಮ್ಮ ಭಾವಿ ಪ್ರತಿನಿಧಿಗಳ ಬಗ್ಗೆ ತಿಳಿದಿರಬೇಕಾದದ್ದು ಅಗತ್ಯ. ಆಗ ಜನರು ತಮ್ಮ ಮತವನ್ನು ಬುದ್ಧಿಪೂರ್ವಕವಾಗಿ ಚಲಾಯಿಸಿ ತಮ್ಮ ಆಡಳಿತಗಾರರ ಬಗ್ಗೆ ಅಭಿಪ್ರಾಯವನ್ನು ಸೂಚಿಸಬಹುದು. ಉಮೇದುವಾರರ ಪೂರ್ವೇತಿಹಾಸದ ಬಗ್ಗೆ ನಾಗರಿಕರು ತಿಳಿವಳಿಕೆ ಇಲ್ಲದವರಾಗಿದ್ದರೆ ಮತದ ಹಕ್ಕೆಂಬುದು ಅರ್ಥಹೀನವಾಗುತ್ತದೆ. ಇದೇ ಸಂದರ್ಭದಲ್ಲಿ ನ್ಯಾಯಮೂರ್ತಿ ಧರ್ಮಾಧಿಕಾರಿ ಈ ರೀತಿ ಹೇಳಿದ್ದಾರೆ: ಚುನಾವಣಾ ಪದ್ಧತಿಯನ್ನು ಪಾರದರ್ಶಕವನ್ನಾಗಿ ಮಾಡಿದರೆ ಮತ್ತು ಅದನ್ನು ಶಿಸ್ತಿಗೆ ಒಳಪಡಿಸಿದರೆ ಮಾತ್ರ ಕಪ್ಪು ಹಣದ ಪ್ರಭಾವವನ್ನು ಹಾಗೂ ಅಪರಾಧಿಗಳ ಭುಜಬಲದ ಪ್ರಭಾವವನ್ನು ತಡೆಗಟ್ಟಬಹುದು. ತನ್ಮೂಲಕ ನಾಮಮಾತ್ರವಾಗಿ ರೂಪಗೊಳ್ಳುವ ಪ್ರಜಾ ಪ್ರಭುತ್ವವನ್ನು ರಕ್ಷಿಸಬಹುದು. ಈ ಉದ್ದೇಶ್ಯದ ನೆರವೇರಿಕೆಗಾಗಿ ರಚನಾತ್ಮಕ ಪ್ರಯತ್ನ ನಡೆಯಬೇಕೆಂದು ಅವರು ಹೇಳಿದರು.

ನ್ಯಾಯ ಮೂರ್ತಿಯವರ ಈ ಅಭಿಪ್ರಾಯ ಪಾರ್ಲಿಮೆಂಟಿನ ಶ್ರೇಷ್ಠತೆಯನ್ನು ಪ್ರಶ್ನಿಸುತ್ತದೆ. ಶಾಸಕರು ಮಾಡಿದ ಶಾಸನವನ್ನು ನ್ಯಾಯಾಂಗೀಯ ವಿಮರ್ಶೆಗೆ ಒಳಪಡಿಸುವ ಹಕ್ಕು ನ್ಯಾಯಾಲಯಕ್ಕೆ ಇದೆ ಎಂಬುದನ್ನು ರಾಜಕಿಯಉತ್ಸಾಹಿಗಳು ಮರೆತು ಬಿಡುತ್ತಾರೆ. ಸಂವಿಧಾನದ ೧೪೧ ಮತ್ತು ೧೪೨ನೇ ವಿಧಿಗಳು ಸರ್ವೋಚ್ಚ ನ್ಯಾಯಾಲಯಕ್ಕೆ ವಿಶೇಷ ಅಧಿಕಾರವನ್ನು ಕೊಡುತ್ತವೆ. ಆ ಅಧಿಕಾರದ ಮೇರೆಗೆ ಸರ್ವೋಚ್ಚ ನ್ಯಾಯಾಲಯ ಕೊಡುವಂತಹ ಯಾವುದೇ ಆದೇಶವು ಎಲ್ಲರಿಗೂ ಅನ್ವಯಿಸುತ್ತದೆ ಮತ್ತು ನ್ಯಾಯದ ವಿತರಣೆಗಾಗಿ ಸರ್ವೋಚ್ಚ ನ್ಯಾಯಾಲಯವು ಯಾವುದೇ ಆಜ್ಞೆಯನ್ನು ಹೊರಡಿಸಬಹುದು. ೧೪೪ನೇ ವಿಧಿಯ ಮೇರೆಗೆ ನಾಗರಿಕ ಅಧಿಕಾರಿಗಳು ಮತ್ತು ನ್ಯಾಯಾಲಯದ ಅಧಿಕಾರಿಗಳು ಸರ್ವೋಚ್ಚ ನ್ಯಾಯಾಲಯದ ನೆರವಿಗೆ ಬರಬೇಕೆಂದು ತಿಳಿಸುತ್ತದೆ. ಸರ್ವೋಚ್ಚ ನ್ಯಾಯಾಲಯದ ತೀರ್ಮಾನಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಎಲ್ಲ ಅಧಿಕಾರಿಗಳು ಪರಿಶೀಲಿಸಿದ ಕಾನೂನುಗಳನ್ನು ಜಾರಿಗೊಳಿಸುವ ಕೆಲಸವನ್ನು ಮಾತ್ರ ಕಾರ್ಯಾಂಗವು ಮಾಡುತ್ತದೆ. ವಿಷಯದ ಸುಸಂಬದ್ಧತೆಯ ದೃಷ್ಟಿಯಿಂದ ಇಲ್ಲಿಗೆ ಎಲ್ಲ ವ್ಯವಹಾರ ಮುಕ್ತಾಯವಾಗಬೇಕು. ಪ್ರತಿಯೊಬ್ಬರೂ ನ್ಯಾಯಾಲಯದ ತೀರ್ಮಾನವನ್ನು ಗೌರವ ಪೂರ್ವವಾಗಿ ಒಪ್ಪಿಕೊಳ್ಳಬೇಕು. ನ್ಯಾಯಾಲಯದ ಈ ತೀರ್ಮಾನವನ್ನು ಚುನಾವಣಾ ಆಯೋಗ ಅಧ್ಯಯನ ಮಾಡುತ್ತಿದೆ. ಅದು ಬೇಗನೆಯೇ ಹೊಸ ಸೂಚನೆಯನ್ನು ಪ್ರಕಟಿಸಬಹುದು. ಹೊಸ ಕಾನೂನಿನ ಅಗತ್ಯವೇನಿಲ್ಲ. ಈ ವಿವಾದದ ಹಿಂದಿರುವ

ಮುಖ್ಯ ವಿಷಯ ಮಾಹಿತಿಯನ್ನು ಪಡೆಯುವ ಬಗ್ಗೆ ಇರುವಂತಹ ಜನರ ಅಧಿಕಾರವನ್ನು ಕುರಿತಾದ್ದಾಗಿದೆ. ಮಾಹಿತಿ ಪಡೆಯುವ ಜನರ ಈ ಹಕ್ಕು ಸಂವಿಧಾನದಲ್ಲಿ ಕಾಣಿಸಲಾಗಿರುವ ವಾಕ್‌ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ವಿಸ್ತರಣೆಯೇ ಆಗಿದೆ. ಆದ್ದರಿಂದ ಯಾವುದೇ ಆಡಳಿತಾತ್ಮಕ ಅಥವಾ ಶಾಸಕಾಂಗಿಯ ಆದೇಶದಿಂದ ಆ ಹಕ್ಕನ್ನು ಕುಂಠಿತಗೊಳಿಸಲಾಗದು. ಇದು ಸಂವಿಧಾನದ ಮೂಲ ಆಶಯವಾಗಿದೆ. ಇದನ್ನು ಬದಲಾಯಿಸಲು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರವು ಈ ಸೂಚನೆಯನ್ನು ಬದಲಿಸುವ ಪ್ರಯತ್ನಕ್ಕೆ ಕೈಹಾಕಬಾರದು. ಕಳೆದ ವರ್ಷದ ಮೇ ತಿಂಗಳಿಗೂ ಮತ್ತು ಈ ವರ್ಷದ ಮಾರ್ಚತಿಂಗಳಿಗೂ ವ್ಯತ್ಯಾಸವಿದೆ, ಏಕೆಂದರೆ ಮೇ ತಿಂಗಳಲ್ಲಿ ರಾಜಕಿಯಪಕ್ಷಗಳು ಈ ವಿಷಯದಲ್ಲಿ ಒಂದು ಸಾಮಾನ್ಯ ನಿಲುವಿಗೆ ಬಂದಿದ್ದವು. ಆದರೆ ಈಗ ಅವುಗಳಲ್ಲಿ ಭಿನ್ನಾಭಿಪ್ರಾಯವುಂಟಾಗಿದೆ. ಕಾಂಗ್ರೆಸ್ ಮೊದಲು ಎಲ್ಲ ರಾಜಕಿಯಪಕ್ಷಗಳೊಂದಿಗೆ ಈ ವಿಷಯವಾಗಿ ಸೇರಿಕೊಂಡಿತ್ತು. ಈಗ ನ್ಯಾಯಾಲಯದ ತೀರ್ಮಾನವನ್ನು ಸ್ವಾಗತಿಸುತ್ತಿದೆ. ಅದು ನ್ಯಾಯಾಲಯದ ತೀರ್ಮಾನವನ್ನು ನಿರರ್ಥಕ ಗೊಳಿಸಲು ಸಹಕರಿಸುವುದಿಲ್ಲ. ರಾಷ್ಟ್ರೀಯ ಜನತಾದಳ ಮತ್ತು ಕಮ್ಯುನಿಸ್ಟ್‌ಪಕ್ಷ ಕೂಡ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನೇ ಸಮರ್ಥಿಸುತ್ತವೆ. ಆದರೆ ಕಮ್ಯುನಿಸ್ಟ್ ಪಕ್ಷ ನ್ಯಾಯಾಲಯದ ಈ ತೀರ್ಪನ್ನು ದುರಾದೃಷ್ಟಕರ ವೆಂದು ಹೇಳುತ್ತದೆ. ಭಾರತೀಯ ಜನತಾಪಕ್ಷ ಇನ್ನೊಂದು ಪ್ರಕಾರದ ಸಮಸ್ಯೆಯನ್ನು ಎದುರಿಸುತ್ತಿದೆ. ಬಾಬ್ರಿಮಸೀದಿಯನ್ನು ಕೆಡವುವ ಕೆಲಸದಲ್ಲಿ ಉಪಪ್ರಧಾನಿ ಎಲ್.ಕೆ. ಅಡ್ವಾನಿ, ಮಾನವ ಸಂಪನ್ಮೂಲ ಮಂತ್ರಿ ಮುರಳಿ ಮನೋಹರ ಜೋಷಿ ಮತ್ತು ಪಕ್ಷದನಾಯಕಿ ಉಮಾಭಾರತಿ ಇವರೆಲ್ಲರೂ ತಾವು ಈ ಘಟನೆಯ ಸಂಬಂಧದಲ್ಲಿ ಕೋರ್ಟಿನಲ್ಲಿ ದಾವಾ ಎದುರಿಸುತ್ತಿರುವುದಾಗಿ ಘೋಷಿಸಿಕೊಳ್ಳಬೇಕಾಗಿದೆ. ಮತ್ತು ಯಾವುದೇ ಚುನಾವಣಾ ಅಧಿಕಾರಿ ಈ ಕಾರಣದಿಂದ ತಮ್ಮನ್ನು ಅನರ್ಹರನ್ನಾಗಿ ಘೋಷಿಸಬಾರದೆಂದು ಬಯಸುತ್ತಾರೆ. ಕಾಂಗ್ರೆಸ್ ಪಕ್ಷವು ಸೇರಿದಂತೆ ಎಲ್ಲರಾಜಕಿಯ ಪಕ್ಷಗಳು ಚುನಾವಣಾಧಿಕಾರಿಗೆ ತೀರ್ಮಾನದ ಹಕ್ಕನ್ನು ಕೊಡಲು ಬಯಸುತ್ತಿಲ್ಲ. ಏಕೆಂದರೆ ಎಲ್ಲರಾಜಕಿಯಪಕ್ಷಗಳ ಎಲ್ಲನಾಯಕರು ಒಂದಲ್ಲ ಒಂದು ಅಪರಾಧಕ್ಕೆ ಒಳಗಾಗಿರುತ್ತಾರೆ. ಅಲ್ಲದೆ ಅಪರಾಧ ದಂಡ ಸಹಿತೆ ರಾಜಕಾರಣಿ ಮತ್ತು ಅಪರಾದಿ ಇವರಲ್ಲಿ ಯಾವ ವ್ಯತ್ಯಾಸವನ್ನು ಮಾಡುವುದಿಲ್ಲ. ಈ ಗೊಂದಲವನ್ನು ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗಗಳು ತಮ್ಮ ತಮ್ಮಲ್ಲಿ ಪರಾಮರ್ಶಿಸಿ ನಿವಾರಿಸಬೇಕಾಗಿದೆ. ಅನೇಕ ರಾಜ್ಯಗಳಲ್ಲಿ ರಾಜಕಾರಣ ದ್ವೇಷಾಸೂಯೆಗಳಿಂದ

ಕೂಡಿದೆ. ಆದ್ದರಿಂದ ಅಧಿಕಾರರೂಡ ರಾಜಕಿಯಪಕ್ಷಗಳು ತಮ್ಮ ವಿರೋಧಿ ಪಕ್ಷಗಳ ನಾಯಕರ ವಿರುದ್ಧ ಆಧಾರವಿಲ್ಲದ ಆರೋಪಗಳನ್ನು ಹೊರಿಸಲು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತವೆ. ಉತ್ತರಪ್ರದೇಶ, ಬಿಹಾರ, ಹರಿಯಾಣ, ಓರಿಸ್ಸಾ ಮತ್ತು ತಮಿಳುನಾಡು ಇಂತಹ ಕೃತ್ಯಗಳಿಂದಾಗಿ ಕುಪ್ರಸಿದ್ಧವಾಗಿವೆ. ಈ ಎಲ್ಲ ವಿವಾದಾತ್ಮಕ ಸಂಗತಿಗಳಿಗೆ ಮೂಲ ಕಾರಣ ೨೦೦೦ ಇಸವಿಯ ನವಂಬರ್ ತಿಂಗಳಲ್ಲಿ ದಿಲ್ಲಿ ಉಚ್ಚ ನ್ಯಾಯಾಲಯ ಕೊಟ್ಟಂತಹ ತೀರ್ಪು, ಅದು ತನ್ನ ತೀರ್ಪಿನಲ್ಲಿ ಹೇಳಿದ್ದೇನೆಂದರೆ, ಚುನಾವಣೆಗಳಲ್ಲಿ ಯೋಗ್ಯ ವ್ಯಕ್ತಿಯನ್ನು ಆಯ್ಕೆಮಾಡಬೇಕಾದರೆ ಉಮೇದುವಾರರ ಪೂರ್ವ ಚರಿತ್ರೆಯನ್ನು ಅಂಧಕಾರದಲ್ಲಿ ಇಡಬಾರದೆಂಬುದು ಅಗತ್ಯವಾಗುತ್ತದೆ. ಉಮೇದುವಾರನ ಪೂರ್ವಚರಿತ್ರೆ ಅಂಧಕಾರದಲ್ಲಿ ಉಳಿಯುವುದು ಪ್ರಜಾಪ್ರಭುತ್ವ ಮತ್ತು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ.

ಅನು–ಸು.ಕೌ

(ಡೆಕ್ಕನ್ ಹೆರಾಲ್ಡ್ ಸಾಭಾರ)

****

ಇದುವರೆಗಿನ ರಾಷ್ಟ್ರಾಧ್ಯಕ್ಷರುಗಳು

೧) ಡಾ|| ರಾಜೇಂದ್ರ ಪ್ರಸಾದ್(೨ಅವಧಿ)	೨೬ ಜನವರಿ ೧೯೫೦ ರಿಂದ ೧೩ ಮೇ ೧೯೬೨
೨) ಡಾ|| ಸರ್ವಪಲ್ಲಿ ರಾಧಕೃಷ್ಣನ್	೧೩ ಮೇ ೧೯೬೨ ರಿಂದ ೧೩ ಮೇ ೧೯೬೭
೩) ಡಾ|| ಜಾಕೀರ್ ಹುಸೇನ್	೧೩ ಮೇ ೧೯೬೭ ರಿಂದ ೦೩ ಮೇ ೧೯೬೯
೪) ವಿ.ವಿ.ಗಿರಿ (ಅರೆಕಾಲಿಕ)	೧೩ ಮೇ ೧೯೬೯ ರಿಂದ ೨೦ ಜುಲೈ ೧೯೬೯
೫) ನ್ಯಾಯಮೂರ್ತಿ ಮಹಮ್ಮದ್ ಹಿದಾಯಿತುಲ್ಲಾ (ಅರೆಕಾಲಿಕ)	೨೦ ಜುಲೈ ೧೯೬೯ ರಿಂದ ೨೪ ಆಗಸ್ಟ್ ೧೯೬೯
೬) ವಿ.ವಿ. ಗಿರಿ	೨೪ ಆಗಸ್ಟ್ ೧೯೬೯ ರಿಂದ ೨೪ ಆಗಸ್ಟ್ ೧೯೭೪
೭) ಪ ಕ್ರುದ್ದೀನ್ ಆಲಿ ಅಹಮ್ಮದ್	೨೪ ಆಗಸ್ಟ್ ೧೯೭೪ ರಿಂದ ೧೧ ಫೆಬ್ರವರಿ ೧೯೭೭
೮) ಬಿ.ಡಿ. ಜತ್ತಿ (ಅರೆಕಾಲಿಕ)	೧೧ ಫೆಬ್ರವರಿ ೧೯೭೭ ರಿಂದ ೨೫ ಜುಲೈ ೧೯೭೭
೯) ನೀಲಂ ಸಂಜೀವರೆಡ್ಡಿ (ಅವಿರೋಧ)	೨೫ ಜುಲೈ ೧೯೭೭ ರಿಂದ ೨೫ ಜಲೈ ೧೯೮೨
೧೦) ಗ್ಯಾನಿ ಜೇಲ್‌ಸಿಂಗ್	೨೫ ಜಲೈ ೧೯೮೨ ರಿಂದ ೧೫ ಜುಲೈ ೧೯೮೭
೧೧) ಎಸ್.ವೆಂಕಟರಾಮನ್	೨೫ ಜುಲೈ ೧೯೮೭ ರಿಂದ ೨೫ ಜುಲೈ ೧೯೯೨
೧೨) ಶಂಕರದಯಾಳ್ ಶರ್ಮ	೨೫ ಜುಲೈ ೧೯೯೨ ರಿಂದ ೨೫ ಜುಲೈ ೧೯೯೭
೧೩) ಕೆ. ಆರ್. ನಾರಾಯಣನ್	೧೫ ಜುಲೈ ೧೯೯೭ ರಿಂದ
೧೪) ಎ.ಪಿ.ಜೆ. ಅಬ್ದುಲ್‌ಕಲಾಂ	

ನಾನು ಪುನರ್ವಸತಿ ಜವಬ್ದಾರಿ ಹೊತ್ತ ಸಚಿವನಾಗಿದ್ದರೆ?

-ಮಹಾತ್ಮ ಗಾಂಧೀ

೧೯೪೭ ರಲ್ಲಿ ಭಾರತ ವಿಭಜನೆಗೊಂಡಾಗ ದೇಶವು ಬೃಹತ್ ಪ್ರಮಾಣದಲ್ಲಿ ನಿರಾಶ್ರಿತರ ಪುರ್ನವಸತಿಯ ಸಮಸ್ಯೆಯನ್ನು ಎದುರಿಸ ಬೇಕಾಯಿತು. ಆ ಸಂದರ್ಭದಲ್ಲಿ ಗಾಂಧೀಜಿಯವರು ತಾವು ಮಂತ್ರಿಯಾಗಿ ಯಾವ ರೀತಿ ಪುರ್ನವಸತಿಯ ಕೆಲಸವನ್ನು ನಿರ್ವಹಿಸುತತ್ತಿದ್ದರೆಂಬುದನ್ನು ಈ ಲೇಖನದಲ್ಲಿ ತಿಳಿಸಿದ್ದಾರೆ.

ನಾನು ಪುನರ್ವಸತಿ ಜವಾಬ್ದಾರಿ ಹೊತ್ತ ಸಚಿವನಾಗಿದ್ದರೆ ಮೊದಲು ಮಾಡುತ್ತಿದ್ದ ಕೆಲಸ ನನ್ನ ಕರ್ತವ್ಯದ ಸ್ಪಷ್ಟ ನಿರೂಪಣೆ. ಲೂಟಿ, ಬೆಂಕಿಹಚ್ಚುವುದು ಮತ್ತು ಕೊಲೆ ಇವುಗಳ ವಿರುದ್ಧ ನಿರಾಶ್ರಿತರಿಗೆ ರಕ್ಷಣೆ ಒದಗಿಸುವುದಕ್ಕಾಗಿಯೂ, ಅವರಿಗಾಗಿ ಆಹಾರ ವಸ್ತುಗಳ ಸಾಗಾಣಿಕೆ ಮತ್ತು ದರ, ಮನೆ ಕಟ್ಟಲು ಬೇಕಾಗುವ ವಸ್ತುಗಳು ಇವುಗಳ ಮೇಲೆ ಹತೋಟಿಯಿಟ್ಟುಕೊಳ್ಳುವುದಕ್ಕಾಗಿಯೂ ನನ್ನನ್ನು ಸಮರ್ಥನನ್ನಾಗಿ ಮಾಡಲು ನನಗೆ ಅವಶ್ಯಕವಿದ್ದಷ್ಟು ಮಟ್ಟಿಗೆ ನ್ಯಾಯಾಧೀಶರನ್ನೂ, ಪೋಲಿಸಿನವರನ್ನೂ ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಅವರ ಮೇಲೆ ಅಧಿಕಾರ ಚಲಾಯಿಸುವುದಕ್ಕೆ ಮಂತ್ರಿಗಳು ನನ್ನನ್ನು ನಿಯೋಜಿಸಬೇಕಾಗಿತ್ತು. ಆ ರೀತಿ ನ್ನ ಸ್ಥಾನವನ್ನು ಭದ್ರಪಡಿಸಿಕೊಂಡು, ಹಿಂದಿರುಗುವವರ ಸಂಖ್ಯೆಯನ್ನೂ ಅವರೆಲ್ಲಿದ್ದಾರೆಂಬುದನ್ನೂ ಅವರು ಹೇಗೆ ಜೀವಿಸುತ್ತಿದ್ದಾರೆಂಬುದನ್ನೂ ಪತ್ತೆ ಹಚ್ಚಲು ತತ್‌ಕ್ಷಣ ಹೊರಡುತ್ತಿದ್ದೆ. ನಾನು ಇದನ್ನು ವೈಯಕ್ತಿಕವಾಗಿ ನೋಡಿ, ಅವರ ದೂರುಗಳನ್ನು ಅಲ್ಲೇ ಆಗಲೇ ಪರಿಶೀಲಿಸುತ್ತಿದ್ದೆ.

ಇನ್ನೂ ಹಿಂದಿರುಗದಿದ್ದವರ ಬಗ್ಗೆ ಪತ್ರಿಕೆಗಳ ಮೂಲಕ ನೋಟೀಸ್ ಕೊಟ್ಟು ಅವರು ಯಾವ ಷರತ್ತುಗಳ ಮೇಲೆ ಹಿಂದಿರುಗಬಹುದೆಂಬುದನ್ನು ನಿರ್ದಿಷ್ಟವಾಗಿ ತಿಳಿಸುವ ಪ್ರಾಂತ್ಯಭಾಷೆಯ ಹಸ್ತ ಪತ್ರಿಕೆಗಳನ್ನು ಹಂಚಿಸುತ್ತಿದ್ದೆ. ಹಿಂದಿರುಗದಿದ್ದವರ ಬಗ್ಗೆ ನಾನು ಆತಂಕಗೊಳ್ಳುತ್ತಿರಲಿಲ್ಲ.

ಸರ್ಕಾರದ ಕರ್ತವ್ಯ... ಅವರು ಹಿಂದಿರುಗಿದಾಗ ಮಾತ್ರ ಪ್ರಾರಂಭವಾಗುತ್ತದೆ. ಹಿಂದಿರುಗ ಬಯುಸುವವರಿಂದ ಅಥವಾ ಅವರ ಪರವಾಗಿ ಬಂದ ವರ್ತಮಾನಗಳ ಬಗ್ಗೆ ಶೀಘ್ರವಾಗಿ ವ್ಯವಹರಿಸಿ, ಅವಶ್ಯಕತೆ ಇದ್ದವರಿಗೆ ವಾಪಸಾಗಲು ಸಹಾಯ ಮಾಡುವುದಕ್ಕಾಗಿ ಖಾಸಗಿ ವ್ಯಕ್ತಿಗಳನ್ನೂ ನೇಮಿಸುತ್ತಿದ್ದೆ. ಗೈರುಹಾಜರಾಗಿದ್ದವರ ಭೂಮಿ, ಮನೆಗಳಿಗೆ ನಾನು ಧರ್ಮದರ್ಶಿಯಾಗಿದ್ದು, ಅವರ ಮೇಲೆ ಜಾರಿಮಾಡಲಾಗುತ್ತಿದ್ದ ನೋಟೀಸುಗಳಲ್ಲಿ ನಮೂದಿಸಲಾಗಿದ್ದ ಕಾಲಾನಂತರ ಸರ್ಕಾರಕ್ಕೆ ಸೂಕ್ತ ಕಂಡ ರೀತಿಯಲ್ಲಿ ಆ ಭೂಮಿಗಳನ್ನೂ, ಮನೆಗಳನ್ನೂ ಗೈರುಹಾಜರಾಗಿದ್ದವರ ವಾರಸುದಾರರ ಹಿತಕ್ಕಾಗಿ ಉಪಯೋಗಿಸುವ, ಅಂಥ ವಾರಸುದಾರರಿಲ್ಲದಿದ್ದರೆ ಪ್ರಾಂತ್ಯದ ನಿರಾಶ್ರಿತರ ಹಿತಕ್ಕಾಗಿ ಉಪಯೋಗಿಸುವ ನೋಟೀಸನ್ನು ಅವರ ಮೇಲೆ ಜಾರಿಮಾಡಿಸುತ್ತಿದ್ದೆ.

ಸ್ಥಳೀಯ ಲೀಗಿನ ಸಹಕಾರವನ್ನು ಆಹ್ವಾನಿಸಿ ಶಿಫಾರಸ್ಸುಗಳಿಗೆ ನ್ಯಾಯಬದ್ಧ ಬೆಲೆಯನ್ನು ಕೊಡುತ್ತಿದ್ದೆ. ನಿರಾಶ್ರಿತರು ತಮಗೆ ಶಕ್ಯವಿದ್ದ ಕೆಲಸವನ್ನು ಪಡಿತರ ಅಥವಾ ಇತರ ಸಹಾಯವನ್ನು ಪಡೆದು ಮೊದಲು ನಿರೀಕ್ಷಸುತ್ತಿದ್ದೆನೇ ಹೊರತು ಅವರಿಗೆ ಭಿಕ್ಷೆ ನೀಡುತ್ತಿರಲಿಲ್ಲ. ಈ ರೀತಿಯಲ್ಲಿ ಸರ್ಕಾರ ಅವರಿಗೆ ಕೊಡುತ್ತಿದ್ದ ಎಲ್ಲ ಸಹಾಯಕ್ಕೂ ತಾವು ಪೂರ್ಣವಾಗಿ ಅರ್ಹರಾಗಿದ್ದರೆಂದು ಸರ್ವವಿಧದಲ್ಲಿಯೂ ಅವರು ಭಾವಿಸಿಕೊಳ್ಳುವಂತೆ ಮಾಡುತ್ತಿದ್ದೆ.

ಅಪರಾಧದ ಸಂಶಯಕ್ಕೆ ಗುರಿಯಾಗಿ ಬಂಧನದಲ್ಲಿದ್ದ ಎಲ್ಲರನ್ನೂ ವಿಳಂಬವಿಲ್ಲದೆ ವಿಚಾರಣೆಗೆ ಗುರಿಪಡಿಸುತ್ತಿದ್ದೆ. ಕಾನೂನಿನ ಕ್ರಮಗಳಿಂದ ಇನ್ನೂ ತಪ್ಪಿಸಿಕೊಳ್ಳುತ್ತಿದ್ದವರನ್ನು ದಸ್ತಗಿರಿ ಮಾಡಿಸುತ್ತಿದ್ದೆ. ತಪ್ಪಿತಸ್ಥರನ್ನು ಪತ್ತೆಹಚ್ಚಿ ಅವರನ್ನು ಕಾನೂನಿನ ಕಟ್ಟಳೆಗಳಿಗೆ ಗುರಿಪಡಿಸಲು ಯಾವ ಪ್ರಯತ್ನವನ್ನೂಮಾಡದೆ ಬಿಡುತ್ತಿರಲಿಲ್ಲ.

೧೯೪೭ ನೇ ಮೇ ೨೪ ರಂದು ಗಾಂಧೀಜಿ ಅಂತಿಮವಾಗಿ ಬಿಹಾರ ದಿಂದ ಹೊರಡುವುದಕ್ಕೆ ಮುಂಚೆ ಈ ರೀತಿಯಾಗಿ ಪುನರ್ವಸತಿ ಕೆಲಸಕ್ಕಾಗಿ ಸರ್ಕಾರಿ ಹಾಗೂ ಖಾಸಗಿ ಯಂತ್ರಗಳಿಗೆ ಅಂತಿಮ ರೂಪವನ್ನು ಕೊಡಲು ಸಹಾಯ ಮಾಡಿದುದಲ್ಲದೆ ಯಾವ ಮಾರ್ಗದಲ್ಲಿ ಕೆಲಸ ಮಾಡಬೇಕೆಂಬುದನ್ನೂ ವಿಧಾಯಕ ಮಾಡಿದ್ದರು. ಮಾನಸಿಕ ಪುನಃ ಶಿಕ್ಷಣವೂ ಚೆನ್ನಾಗಿ ಮುಂದುವರೆದಿತ್ತು ಅವರು ದೆಹಲಿಯಿಂದ ಬಿಡುಗಡೆಯಾದ

ತತ್ಕ್ಷಣ ವಾಪಸು ಬಂದು ಮಾಡದೆ ಉಳಿದಿದ್ದುದನ್ನು ಪೂರ್ಣಗೊಳಿಸಲು ನಿರೀಕ್ಷಿಸಿದ್ದರು. ಭಾರತದಲ್ಲಿ ಎಲ್ಲಿಯಾದರೂ ವಿಷಯವನ್ನು ಪರಿಣಾಮಕಾರಿಯಾಗಿ ನಿರ್ನಾಮಗೊಳಿಸಿದರೆ ಅದರ ಪ್ರಭಾವ ಹರಿಸಿ, ಭಾರತಕ್ಕೆ ಇಚ್ಛೆಯಿಲ್ಲದಿದ್ದರೂ ಯಾವ ಹತಾಶಾಪೂರ್ಣ ಸ್ವಯಂ ವಿಚ್ಛೇದನಾಕಾರ್ಯಕ್ಕೆ ಅದನ್ನು ದೂಡಲಾಗಿತ್ತೋ ಆ ಕಾರ್ಯದಿಂದ ಭಾರತವನ್ನು ಇನ್ನೂ ರಕ್ಷಿಸಬಹುದಾಗಿತ್ತು, ಆದರೆ ದೇವರ ಇಚ್ಛೆ ಬೇರೆಯಾಗಿತ್ತು. ಅವರು ಬಿಹಾರದಲ್ಲಿ ಮುಂದೆಂದೂ ನೆಲಸಲಾಗಲಿಲ್ಲ. ಅನಂತರದ ಕಾಲದಲ್ಲಿ ಅವರು ರಾಜಧಾನಿಗೆ ತಮ್ಮ ಕಾಲವನ್ನೂ ಗಮನವನ್ನೂ ಅರ್ಪಿಸುವುದು ದೈವನಿಯಮಕವಾಗಿತ್ತು. ಅವರನ್ನು ನೌಖಾಲಿಗೆ ಕರೆದೊಯ್ದು ಅನಂತರ ಬಿಹಾರಕ್ಕೆ ಬರಮಾಡಿಕೊಂಡಿದ್ದ ಅದೇ ಯಜ್ಞ ಈಗ ಅವರನ್ನು ದೆಹಲಿಗೆ ತೆಗೆದುಕೊಂಡು ಹೋಯಿತು. ದೃಶ್ಯ ಬದಲಾವಣೆಯಾಯಿತು; ಯುದ್ಧ ಒಂದೇ ಆಯಿತು.

(ತೆಂಡುಲ್ಕರರ ಮಹಾತ್ಮಾ ಸಂಪುಟದ ಸಾಭಾರ.)

****

ಗಣರಾಜ್ಯ : ಡಿ.ವಿ.ಜಿ ನೋಡಿದಂತೆ

ನಮ್ಮ ದೇಶದಲ್ಲಿ ಈಚೆಗೆ ಹೊಸ ಹೊಸ ಕಾನೂನುಗಳು ಮಳೆಗಾಲದ ಝುರಿ ತೊರೆಗಳಂತೆ ಉಬ್ಬುಬ್ಬಿ ಬರುತ್ತಿವೆ. ಅವು ಗಾತ್ರದಲ್ಲಿ ವಿಪರೀತವಾಗಿರುವುದು ಮಾತ್ರವೇ ಅಲ್ಲ; ಅವುಗಳ ವಿಷಯ ವಿವಿಧತೆ ಭ್ರಾಂತಿಕಾರಕವಾಗಿದೆ ಮತ್ತು ಅವುಗಳ ವಿವರಾಂಶಗಳನ್ನು ಗ್ರಹಿಸಿ ಮನಸ್ಸಿನಲ್ಲಿ ರೂಪಿಸಿಕೊಳ್ಳುವುದು ಅಸಾಧ್ಯವಾಗಿದೆ. ಈ ಶಾಸನ ಪ್ರವಾಹವನ್ನು ಯಾರಾದರೂ ಪರೀಕ್ಷಿಸಿ ನೋಡುತ್ತಿದ್ದಾರೆಯೆ? ಶಾಸನದ ಮಂತ್ರಿಗಳಾದರೂ ತಾವು ಮಾಡುತ್ತಿರುವ ಕೆಲಸದ ಆಧಾರವೇನು, ಪರಿಣಾಮವೇನು ಎಂಬುದನ್ನು ತಳಮಟ್ಟ ಶೋಧನೆ ಮಾಡಿದ್ದಾರೆಯೆ?

ರಾಜ್ಯಶಾಸನವು ಪ್ರಜಾಭಿಪ್ರಾಯದ ಪ್ರತಿ ಬಿಂಬವೆಂಬುದು ಪ್ರಜಾರಾಜ್ಯ ಪದ್ಧತಿಯ ಮೂಲತತ್ವ. ರಾಜ್ಯದ ಸಮಸ್ತ ಆಡಳಿತಗಳೂ ಶಾಸನದಂತೆ ನಡೆಯಬೇಕಾದವು; ಶಾಸನವಾದರೋ ಜನದ ಇಷ್ಟಕ್ಕನುಸಾರವಾಗಿ ನಡೆಯಬೇಕಾದದ್ದು. ಈಗ ಬಂಡಿಬಂಡಿಯಾಗಿ ನಡೆಯುತ್ತಿರುವ ಶಾಸನ ಕಲಾಪವು ಜನದ ಅಭಿಪ್ರಾಯದ ಮೇರೆಗೆ ಆಗುತ್ತಿದೆಯೆ? ಜನಕ್ಕೆ ಅದರ ನಿಜಸ್ವರೂಪದ ಅರಿವಾದರೂ ಇದೆಯೆ?

ರಾಜಕಿಯದಲ್ಲಿ ಅಧಿಕಾರಕ್ಕಾಗಿ ಪಕ್ಷಕಕ್ಷಿಗಳು ಹಾರಾಡಿ ಹೋರಾಡುವುದು ಸ್ವಾಭಾವಿಕ. ಅವು ತಮ್ಮ ತಮ್ಮ ಮೇಲ್ಮೆಯನ್ನು ತೋರ್ಪಡಿಸಿಕೊಳ್ಳುವುದಕ್ಕೋಸ್ಕರ ಹೊಸ ಹೊಸ ಕಾನೂನುಗಳನ್ನು ಹೊಸ ಹೊಸ ಕಾರ್ಯ ಯೋಜನೆಗಳನ್ನು ದೇಶದ ಮುಂದಿರಿಸುತ್ತವೆ. ಪ್ರತಿಯೊಂದು ಪಕ್ಷವೂ ಭೂಮಿಗೆ ಸ್ವರ್ಗವನ್ನು ತಂದಿರಿಸಲು ತನ್ನದೇ ಮೆಹನತ್ತೊಂದು ಮೆಚ್ಚಿಗೆ ಪಡೆಯುವ ಮೇಲ್ಪೋಟಿಯಲ್ಲಿ ಶಾಸನ ಪುಸ್ತಕದ ಗಾತ್ರವನ್ನು ಮತ್ತಷ್ಟು ಬೆಳೆಸುತ್ತವೆ. ಶಾಸನ ಸಭೆಗಳಲ್ಲಿರುವ ತಾವೇನೂ ಸುಮ್ಮನೆ ಕುಳಿತಿಲ್ಲವೆಂದು ತೋರಿಸಿ ಕೊಳ್ಳುವುದಕ್ಕೂ ಕಾನೂನು ಕಡತದ ಹೊರೆಯನ್ನು ದೊಡ್ಡದು ಮಾಡಬೇಕಾಗುತ್ತದೆ. ಪಕ್ಷದಲ್ಲಿ ಸಂಖ್ಯಾಬಲವಿದ್ದರೆ ಶಾಸನ ರಚನೆ ಕಷ್ಟವಲ್ಲ. ಕಷ್ಟವಾದದ್ದು ಆಡಳಿತ ಶಾಸನಕ್ಕೆ ಬೇಕಾದುದು ಕಾಗದ, ಮಸಿ. ಈ ಕೆಲಸ ಹೀಗೆ ಅಗ್ಗವಾದದ್ದಾದಕಾರಣ ಹಾಗೂ ಹೀಗೂ ಕಾನೂನು ಬೆಳೆಯುತ್ತದೆ ಅದಕ್ಕೆ ತಕ್ಕಂತೆ ಜನದ ಸುಖ ಸಂಪತ್ತು

ಬೆಳೆಯುತ್ತದೆಯೆಂಬುದು ಮಾತ್ರ ಖಾತರಿಯ ಮಾತಲ್ಲ.

ನಮ್ಮಲ್ಲಿ ಈಗ ಶಾಸನರಚನೆ ಆಗುತ್ತಿರುವ ರೀತಿಯುನ್ನು ನೋಡೋಣ: ಪ್ರಜೆ ಚುನಾವಣೆ ಮಾಡಿದ ಪ್ರತಿನಿಧಿಗಳು ನಮ್ಮ ಶಾಸನಸಭೆಗಳಲ್ಲಿ ಇರುತ್ತಾರೆಂಬುದು ನಿಜ. ಆದರೆ ಅವರು ಕೆಲಸ ಮಾಡುವ ಕ್ರಮ ಹೇಗೆ? ಶಾಸನಸಭೆಯು ಒಳಗಡೆ ಎರಡು ಮೂರು ರಾಜಕಿಯುಪಕ್ಷಗಳಿವೆ. ಆ ಪಕ್ಷಗಳಲ್ಲಿ ಕಾಂಗ್ರೆಸ್ ಪಕ್ಷದ ಸಂಖ್ಯೆ ಮಿಕ್ಕವುಗಳಿಗಿಂತ ದೊಡ್ಡದು. ಆದಕಾರಣ ಕಾಂಗ್ರೆಸ್ ನಾಯಕರು ಮಂತ್ರಿ ಪದವಿಗಳಲ್ಲಿ ಇರುತ್ತಾರೆ. ಇದು ನ್ಯಾಯವಾದದ್ದೇ. ಕಾಂಗ್ರೆಸ್ ಪಕ್ಷದ ಶಾಸನ ಸಭಾ ಸದಸ್ಯರಾದರೂ ತಮ್ಮ ಪಕ್ಷದ ನಾಯಕರ ಹಿಡಿತಕ್ಕೆ ಒಳಪಟ್ಟವರಾಗಿರುತ್ತಾರೆ. ಹೀಗೆ ಈ ಪ್ರಬಲ ಪಕ್ಷದ ಶಾಸನ ಸದಸ್ಯರು ತಮ್ಮ ನಾಯಕರ ಅಧೀನದಲ್ಲಿ ಒಂದು ಪಂಗಡವಾಗಿ ಯಾವ ಯಾವ ಕಾನೂನು, ಯಾವ ಯಾವ ಕಾರುಬಾರು ಆಗಬೇಕೆಂಬುದನ್ನು ತಮ್ಮ ಪಕ್ಷ ಸಭೆಯಲ್ಲಿ ನಿರ್ಣಯಿಸಿಕೊಳ್ಳುತ್ತಾರೆ. ಈ ಏಕ ಪಕ್ಷದ ನಿರ್ಣಯವೇ ಕೆಲವು ದಿನವಾದ ಬಳಿಕ ಶಾಸನ ಸಭೆಯ ಮುಂದೆ ಕಾನೂನಿನ ಮಸೂದೆಯಾಗಿ, ಅಥವಾ ಕರಡು ಠರಾವಾಗಿ ಅವತರಿಸುತ್ತದೆ. ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸಂಖ್ಯೆ ದೊಡ್ಡದಾದ ಕಾರಣ ಆ ಪಕ್ಷದ ಒಳಗಣ ತೀರ್ಮಾನವೇ ಶಾಸನ ಸಭೆಯಲ್ಲಿ ಆ ಸಂಸ್ಥೆಯ ಹೊರಗಣ ತೀರ್ಮಾನವಾಗುತ್ತದೆ. ಎಂದರೆ ಈಗಣ ಶಾಸನ ರಚನೆಯೆಲ್ಲಾ ಏಕ ಪಕ್ಷದ ಕೈವಾಡವೆಂಬುದು ಸ್ಪಷ್ಟವಾಗಿದೆ.

ಕಾಂಗ್ರೆಸ್ ಪಕ್ಷಸಮಸ್ತ ದೇಶದ ಏಕೈಕ ಪ್ರತಿನಿಧಿಯನ್ನುವ ಪಕ್ಷದಲ್ಲಿ ಇನ್ನು ಬೇರೆಯಾಗಿ ಶಾಸನಸಭೆ ಇರುವುದೇತಕೆ? ಹಾಗಲ್ಲದೆ ಕಾಂಗ್ರೆಸ್ ಪಕ್ಷವು ದೇಶವೆಲ್ಲ ಅಲ್ಲ. ದೇಶದ ಒಂದು ಭಾಗಮಾತ್ರ; ದೇಶದ ಮಿಕ್ಕ ಭಾಗ ಇತರ ಪಕ್ಷಗಳಲ್ಲಿಯೂ ನಿಷ್ಪಾಕ್ಷಿಕ ಜನದಲ್ಲಿಯೂ ನಿಂತಿದೆ ಎಂದು ಹೇಳುವುದಾದರೆ ಆ ಇತರ ಪಕ್ಷಗಳ ಮತ್ತು ನಿಷ್ಪಾಕ್ಷಕರ ಪ್ರತಿನಿಧಿಗಳು ಶಾಸನಸಭೆಯಲ್ಲಿ ಅಲ್ಪಸಂಖ್ಯಾತರಾಗಿ ಅಶಕ್ತರಾಗಿದ್ದಾರೆಂಬುದನ್ನು ನಾವು ಆಲೋಚಿಸಬೇಕಾಗಿದೆ. ಅವರಿಗೆ ದೇಶದ ಮಹಾಜನ ಬೆಂಬಲ ಕೊಟ್ಟಲ್ಲದೆ ಪ್ರತಿಪಕ್ಷಸ್ತರ ಕೆಲಸ ಸಾರ್ಥಕವಾಗದು.

(ಡಿ.ವಿ.ಜಿ. ಸಮಗ್ರ ಸಾಹಿತ್ಯ ಸಾಭಾರ.)

****

ರಾಜಕಾರಣಿಗಳ ಕುರ್ಚಿಯ ಕಥೆ

-ವಿಶ್ವೇಶ್ವರ ಭಟ್

ನಮ್ಮ ರಾಜಕಾರಣಿಗಳೇಕೆ ನಿವೃತ್ತರಾಗುವುದಿಲ್ಲ?

ನಡೆದಾಡಲು ಆಗದಿರಲಿ, ಕಿವಿ ಕೇಳದಿರಲಿ, ಕಣ್ಣು ಕಾಣದಿರಲಿ, ಮನಸ್ಸು, ದೇಹಕ್ಕೆ ಮುಪ್ಪು ಅಡರಿಕೊಂಡು ನಿಸ್ತೇಜವಾಗಿರಲಿ, ಬೇರೆಯವರ ಸಹಾಯವಿಲ್ಲದೆ ಒಂದು ಹೆಜ್ಜೆ ಕಿತ್ತಿಡಲು ಆಗದಿರಲಿ, ಅಂಗಾಂಗಗಳೆಲ್ಲ ಕಸುವು ಕಳೆದುಕೊಂಡು ಶಟಗೊಳ್ಳಲಿ, ಇಡೀ ಶರೀರ ಜೀವಚ್ಛವವಾಗಿ ಬಿದ್ದುಕೊಂಡಿರಲಿ ಅಧಿಕಾರ ಮಾತ್ರ ಬಗಲಲ್ಲಿರಬೇಕು. ಮಂತ್ರಿಗಿರಿ, ರಾಜ್ಯಪಾಲ ಹುದ್ದೆ, ರಾಯಭಾರಿಪಟ್ಟ ಮಾತ್ರ ಇರಲೇಬೇಕು.

ಜೀವ, ಜೀವನವಿರುವುದೇ ಈ ಹುದ್ದೆಗಳನ್ನು ಗಿಟ್ಟಿಸುವುದರಲ್ಲಿ ಹಾಗೂ ಇಟ್ಟುಕೊಳ್ಳುವುದರಲ್ಲಿ ಎಂದು ರಾಜಕಾರಣಿಗಳು ಭಾವಿಸಿರುವುದರಿಂದ ಅವರಿಗೆ ನಿವೃತ್ತಿಯ ಪ್ರಶ್ನೆಯೇ ಕಾಡುವುದಿಲ್ಲ. ವಕ್ರತುಂಡೋಕ್ತಿಯಲ್ಲಿ ಹೇಳಿದಂತೆ ಕೆಲವು ರಾಜಕಾರಣಿಗಳಿಗೆ ನಿವೃತ್ತಿಯೆಂದರೆ ಈ ಲೋಕವನ್ನು ತ್ಯಜಿಸುವುದು ಎಂಬುದು ಕಟುಸತ್ಯ. ಯಾವುದೇ ಮಂತ್ರಿ, ರಾಜಕಾರಣಿಯ ಮೇಲೆ ಗಂಭೀರ ಆರೋಪ ಮಾಡಿ ಆಗ ಅವರು ಆರೋಪ ಸಾಬೀತಾದರೆ ರಾಜಕಾರಣದಿಂದ ನಿವೃತ್ತಿ ಎಂದು ಹೇಳುವುದುಂಟು. ಆದರೆ ಸ್ವತಂತ್ರ ಭಾರತದಲ್ಲಿ ಯಾವ ರಾಜಕಾರಣಿಯೂ ಈ ಕಾರಣದಿಂದ ನಿವೃತ್ತಿಯಾದ ನಿದರ್ಶನವಂತೂ ಇಲ್ಲ.

ನಮ್ಮ ದೇಶದಲ್ಲಿರುವ ಎಲ್ಲ ರಾಜ್ಯಪಾಲರನ್ನು ನೋಡಿ. ಎಲ್ಲರೂ ವಯಸ್ಸಾದವರು. ಸ್ವತಂತ್ರವಾಗಿ ಯಾವ ಕೆಲಸವನ್ನೂ ಮಾಡಲು ಆಗದವರು. ಉತ್ತರ ಪ್ರದೇಶದ ರಾಜ್ಯಪಾಲರೊಬ್ಬರಿದ್ದರು. ಅವರು ಸ್ನಾನ, ಬಟ್ಟೆ ತೊಡುವುದನ್ನೂ ಸಹ ಬೇರೆಯವರ ಸಹಾಯದಿಂದಲೇ ಮಾಡಿಸಿಕೊಳ್ಳಬೇಕಿತ್ತು. ಇಂಥ ಚಾಕರಿಗೆಂದೇ ಮೂವರು ಜವಾನರು ನೇಮಕವಾಗಿದ್ದರು. ಬಗ್ಗಿ ಸಾಕ್ಸ್ ಹಾಕಿಕೊಳ್ಳಲೂ ಸಹ ಇವರಿಗೆ ಆಗುತ್ತಿರಲಿಲ್ಲ. ಬನಿಯನ್ ಧರಿಸಲು ಆಗುತ್ತಿರಲಿಲ್ಲ. ಮಂಚದ ಮೇಲೆ ಅನಾಮತ್ತಾಗಿ ಎತ್ತಿ ಮಲಗಿಸಬೇಕಾಗುತ್ತಿತ್ತು. ನಂತರ ಇದೇ ಸ್ಥಿತಿ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮ ಅವರಿಗೂ ಬಂದೊದಗಿತ್ತು. ಪ್ರಧಾನಿ ವಾಜಪೇಯಿ ಅವರದೂ ಹೆಚ್ಚುಕಮ್ಮಿ ಇದೇ ಸ್ಥಿತಿ. ಪ್ರಧಾನಿಯಾಗಲು ಹವಣಿಸುತ್ತಿರುವ

ದೇವೇಗೌಡ, ವಿ.ಪಿ. ಸಿಂಗ್, ಚಂದ್ರಶೇಖರ್, ಐ.ಕೆ. ಗುಜ್ರಾಲ್, ಜಾರ್ಜ್ ಫರ್ನಾಂಡಿಸ್, ಹರಕಿಶನ್ ಸಿಂಗ್ ಸುರ್ಜಿತ್, ಜ್ಯೋತಿ ಬಸು ಇವರೆಲ್ಲರೂ ಸೆವೆಂಟಿ ಪ್ಲಸ್. ಇವರ ಸನಿಹ ನಿವೃತ್ತಿ ಸುಳಿದೇ ಇಲ್ಲ. ನಮ್ಮ ದೇವೇಗೌಡರಿಗಂತೂ ಕೈತುಂಬಾ ಕೆಲಸ. ಮೈತುಂಬಾ ರಾಜಕಾರಣ. ವಿನಾಕಾರಣ ದೇಶದ ಚಿಂತೆ. ಸ(ಸ್ವ)ಕಾರಣಕ್ಕಾಗಿ ಸದಾ ಕ್ರಿಯಾಶೀಲ. ಅಧಿಕಾರ ಪಡೆಯುವುದಕ್ಕಾಗಿ ಶತಾಯಗತಾಯ ಹೋರಾಟ. ಸೋತರೂ ಸುಮ್ಮನಾಗದೇ ಮತ್ತೆಮತ್ತೆ ಧೂಳಿನಿಂದ ಎದ್ದು ಬರುವ ಪ್ರಯತ್ನ. ರಾಮಕೃಷ್ಣ ಹೆಗಡೆ ನಿವೃತ್ತಿಯ ಬಗ್ಗೆ ಮಾತನಾಡಿದರು. ಆದರೆ ನಿವೃತ್ತರಾಗಲಿಲ್ಲ. ರಾಜಕಿಯಸನ್ಯಾಸದ ಬಗ್ಗೆ ಪ್ರತಿಪಾದಿಸಿದರು. ಆದರೆ ಸನ್ಯಾಸತ್ವ ಸ್ವೀಕರಿಸಲಿಲ್ಲ.

ಇದೇ ಸ್ಥಿಯಲ್ಲಿ ಅಲ್ಲವೇ ಎಂ.ಜಿ.ರಾಮಚಂದ್ರನ್ ತಮಿಳುನಾಡನ್ನು ಎರಡು ವರ್ಷ ಆಳಿದ್ದು. ಚಿಕಿತ್ಸೆಗೆಂದು ಎಂಜಿ.ಆರ್ ವಿದೇಶಕ್ಕೆ ಹೋದರೂ ಕುರ್ಚಿ ಮಾತ್ರ ಬಿಟ್ಟಿರಲಿಲ್ಲ. ಗಂಟಲು ಹರಕೊಂಡು ಬಿದ್ದುಹೋಗುವಂತೆ ಕಿರುಚಿದರೂ ಅವರಿಗೆ ಕೇಳಿಸುತ್ತಿರಲಿಲ್ಲ. ಎದುರಿಗೆ ಆನೆ ಬಂದು ನಿಂತರೂ ಕಾಣಿಸುತ್ತಿರಲಿಲ್ಲ. ದೇಹದ ಇನ್ನಿತರ ಬಿಡಿಭಾಗಗಳು ಕೆಲಸ ಮಾಡುತ್ತಿರಲಿಲ್ಲ. ಆಸ್ಪತ್ರೆಯ ಹಾಸಿಗೆಯ ಮೇಲೆ ಎಂ.ಜಿ.ಆರ್ ಶಾಂತವಾಗಿ ಜೀವಂತಹೆಣವಾಗಿ ಮಲಗಿದ್ದರು. ಅದಕ್ಕಿಂತ ಮುಖ್ಯವಾಗಿ ಆ ಸ್ಥಿತಿಯಲ್ಲಿ ಅವರು ತಮಿಳುನಾಡಿನ ಸಕ್ರಿಯ, ಜನಪ್ರಿಯ ಮುಖ್ಯಮಂತ್ರಿಯಾಗಿದ್ದರು!

ಮೊನ್ನೆ ಮೊನ್ನೆ ನಿಧನರಾದ ಮುರಸೋಳಿ ಮಾರನ್ ಎಂಬ ಕೇಂದ್ರ ಸಚಿವರ ಕತೆಯೇನು ಬೇರೆಯೇ? ಅವರಿಗೆ ಮಂತ್ರಿಯಾಗಲು ದೇವೇಗೌಡರ ಸಂಪುಟವಾದರೂ ಆದೀತು, ವಾಜಪೇಯಿ ಅವರ ಸಂಪುಟವಾದರೂ ಆದೀತು. ನಡೆದಾಡಲು ಆಗಲಿ, ಬಿಡಲಿ, ಮಂತ್ರಿ ಪದವಿ ಮಾತ್ರ ಬೇಕು. ಸರಿಸುಮಾರು ಎರಡು ವರ್ಷ ಹದಗೆಟ್ಟ ಆರೋಗ್ಯ ದಿಂದ ನಿಷ್ಕ್ರಿಯರಾಗಿದ್ದ ಮಾರನ್ ಮಂತ್ರಿ ಸ್ಥಾನ ಬಿಡಲಿಲ್ಲ. ಒಂದೇ ಒಂದು ಫೈಲನ್ನೂ ಸಹ ನೋಡಲು ಆಗುತ್ತಿರಲಿಲ್ಲ. ಆರು ತಿಂಗಳು ಕಚೇರಿಗೂ ಬರಲಿಲ್ಲ. ಯಾರನ್ನೂ ಭೇಟಿ ಮಾಡಲಿಲ್ಲ. ಒಂದೂ ಸಹಿ ಹಾಕಲಿಲ್ಲ. ಆದರೂ ಅವರು ದೇಶದ ಆರ್ಥಿಕ ಸ್ಥಿತಿಯನ್ನು ನಿಯಂತ್ರಿಸುವ ವಾಣಿಜ್ಯ ಖಾತೆಯಂಥ ಪ್ರಮುಖ ಖಾತೆಗೆ ಮಂತ್ರಿಯಾಗಿದ್ದರು. ಯಾವಾಗ ಈ ಖಾತೆ ಕಿತ್ತು ಕಿಲುಬು ಹಿಡಿದು ಕಿಲುಸಾರೆದ್ದಿತೋ ವಾಜಪೇಯಿ ತೀರಾ ಪ್ರಯಾಸಪಟ್ಟು ಖಾತೆಯನ್ನು ಬೇರೆಯವರಿಗೆ ವಹಿಸ ಬೇಕಾಯಿತು. ವಾಣಿಜ್ಯ ಖಾತೆಯನ್ನು ಮಾರನ್ ಅವರಿಂದ ಕಿತ್ತುಕೊಂಡಿರಬಹುದು. ಆದರೆ ವಾಜಪೇಯಿ ಅವರಿಗೆ ಖಾತೆ

ಕಿತ್ತುಕೊಳ್ಳಲು ಆಗಲಿಲ್ಲ. ಮಾರನ್ ಖಾತೆ ರಹಿತ ಮಂತ್ರಿಯಾಗಿಯೇ ಸಾಯುವತನಕ ಉಳಿದರು! ಸತ್ತು ರಾಜಕೀಯದಿಂದ ನಿವೃತ್ತರಾದರು!

ಇದೇ ಮಾರನ್‌ರ ಸೋದರ ಸಂಬಂಧಿ ಕರುಣಾನಿಧಿ, ಎಂ.ಜಿ.ಆರ್ ಆಸ್ಪತ್ರೆಯಲ್ಲಿ ಮಲಗಿ ಆಳುತ್ತಿರುವುದನ್ನುನೋಡಿ ಬಾಯಿಗೆ ಬಂದಂತೆ ಬಯ್ದಿದ್ದರು. ಅದೇ ಕರುಣಾನಿಧಿ ಎಂಜಿಆರ್‌ಗೆ ಹೇಳಿದ ಮಾತನ್ನು ತುಸು ನೆನಪಿಸಿಕೊಂಡು ಒಂದು ಸಣ್ಣ ಬುದ್ಧಿಮಾತನ್ನು ಮಾರನ್‌ಗೆ ಹೇಳಬಹುದಿತ್ತು. ಹೇಳಲಿಲ್ಲ. ಖಾತೆ ರಹಿತ ಮಂತ್ರಿಯಾಗಿ ಸರಕಾರಿ ವೆಚ್ಚದಲ್ಲಿ ನಾಚಿಕೆ ಬಿಟ್ಟು ಎಲ್ಲ ಚಿಕಿತ್ಸೆ ಮಾಡಿಸಿಕೊಂಡರು. ಜೀವ ಉಳಿಸಿಕೊಳ್ಳುವುದಕ್ಕಾಗಿ ರಾಜಕಾರಣಿಗಳು ಅಧಿಕಾರಕ್ಕೆ ಅಂಟಿಕೊಂಡಿರುತ್ತಾರೆ ಎಂದು ಹೇಳಿದ್ದು ಈ ಕಾರಣಕ್ಕೆ.

ಈ ವಿಷಯದಲ್ಲಿ ಸ್ವಲ್ಪ ಅಪವಾದ ಎಂದರೆ ಪಶ್ಚಿಮ ಬಂಗಾಲ ಮುಖ್ಯಮಂತ್ರಿಯಾಗಿದ್ದ ಜ್ಯೋತಿಬಸು. ಮನಸ್ಸುಮಾಡಿದ್ದರೆ ಅವರು ಇನ್ನೂ ಒಂದು ಅವಧಿಗೆ ಅಧಿಕಾರದಲ್ಲಿ ಮುಂದುವರಿಯಬಹುದಿತ್ತು. ವಯಸ್ಸಾಗುತ್ತಿದೆಯೆಂಬುದು ಇಪ್ಪತ್ತೈದು ವರ್ಷ ಅಧಿಕಾರ ನಡೆಸಿದ ಬಳಿಕ ಎಂಬತ್ತೈದನೆ ಇಳಿವಯಸ್ಸಿನಲ್ಲಿ ಗೊತ್ತಾದಾಗ ಅಧಿಕಾರದಿಂದ ಕೆಳಕ್ಕಿಳಿದರು. ಆದರೆ ಜ್ಯೋತಿಬಸು ಸ್ವ ಇಚ್ಛೆಯಿಂದ ಅಧಿಕಾರತ್ಯಾಗ ಮಾಡಿದ್ದಕ್ಕೆ ಬೇರೆಯದೇ ಕತೆಯಿದೆ.

ವಿದೇಶಗಳಲ್ಲಿರುವ ಭಾರತದ ಹೈಕಮೀಷನರ್‌ಗಳು, ರಾಯಭಾರಿಗಳನ್ನು ನೋಡಿ. ಎಲ್ಲ ಎಪ್ಪತ್ತೈದನ್ನು ದಾಟಿದವರು. ಅದೇ ದಿಲ್ಲಿಯಲ್ಲಿರುವ ಇತರ ದೇಶಗಳ ರಾಯಭಾರಿಗಳನ್ನು ನೋಡಿ. ಎಲ್ಲ ಐವತ್ತು–ಐವತ್ತೈದರ ಖದರಿನವರು. ಇಲ್ಲಿ ರಾಜಕೀಯಮಾಡಿ ಸುಸ್ತಾದವರು, ಮಂತ್ರಿಗಿರಿಯ ಅವಕಾಶದಿಂದ ವಂಚಿತರಾದವರು, ಮುಂದೆ ಅಂಥ ಅವಕಾಶ ಪಡೆಯಲು ಭವಿಷ್ಯ ಉಜ್ವಲವಾಗಿಲ್ಲದವರು, ಉನ್ನತ ಹುದ್ದೆಯಲ್ಲಿದ್ದು ನಿವೃತ್ತರಾದ ಅಧಿಕಾರಿಗಳು, ನಿವೃತ್ತಿಯ ನಂತರವೂ ಒಂದಿಲ್ಲೊಂದು ಪದವಿಗೆ ತಮ್ಮನ್ನು ನೆಟ್ಟಿಕೊಂಡಿರುವವರು, ಅಧಿಕಾರದಲ್ಲಿದ್ದಾಗಲೇ ನಿವೃತ್ತಿಯ ನಂತರದ ಅಧಿಕಾರಕ್ಕೆ ಶ್ರಮಿಸಿದವರು ನಮ್ಮ ರಾಯಭಾರಿಗಳು.

ಹೌದು, ನಮ್ಮ ರಾಜಕಾರಣಿಗಳು ನಿವೃತ್ತರಾಗುವುದೇ ಇಲ್ಲ. ಮೊನ್ನೆ ಸಹೋದರ ಅಮೆರಿಕದಿಂದ ಬರುವಾಗ ಪುಸ್ತಕವೊಂದನ್ನು ತಂದು ಕೈಗಿಟ್ಟ. ಅಚ್ಚರಿಯಾಯಿತು. ಒಂದೇ ದಮ್ಮಿಗೆ ಓದಲು ತೊಡಗಿದರೆ ಪುಟಪುಟಗಳಲ್ಲಿ ಕುತೂಹಲಗಳ ಸಾಲುಸಾಲು. ಅಮೆರಿಕದ ಅಧ್ಯಕ್ಷನಾಗಿದ್ದ ಜಿಮ್ಮಿ ಕಾರ್ಟರ್ ಅಮೆರಿಕದ ಕ್ರಾಂತಿಯ ಸಂದರ್ಭದಲ್ಲಿ ನಡೆದ ಘಟನೆಯನ್ನಾಧರಿಸಿದ ಕೃತಿಯದು.

ಪಾಂರಂಗತ ಲೇಖಕನಂತೆ ಕಾರ್ಟರ್ ಈ ಕಾದಂಬರಿ ಬರೆದಿದ್ದಾರೆ. ಕಾದಂಬರಿ ಬರೆದ ಅಮೆರಿಕದ ಮೊದಲ ಅಧ್ಯಕ್ಷ, ಅಮೆರಿಕ ಕ್ರಾಂತಿ ಕುರಿತು ಆರು ವರ್ಷ ಅಧ್ಯಯನ ಮಾಡಿ, ಅನಂತರ ಎರಡು ವರ್ಷ ಬರೆದು ಮುಗಿಸಿದ ಕೃತಿಯಿದು. ಹಾಗೆ ನೋಡಿದರೆ ಕಾರ್ಟರ್ ಈತನಕ ೧೮ ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಇತಿಹಾಸ, ಸಾರ್ವಜನಿಕ ನೀತಿ, ವಿದೇಶಾಂಗ ವ್ಯವಹಾರ, ಕತೆ, ಆತ್ಮಕಥೆ, ಮಕ್ಕಳ ಪುಸ್ತಕಗಳು ಸೇರಿವೆ. ಕಾದಂಬರಿಯ ಹೊದಿಕೆಯನ್ನು ಸರಿಸಿದರೆ ಚಿಕ್ಕದಾದ ಅವರ ಹೆಸರು. ಮುಖಪುಟದ ತೈಲಚಿತ್ರವೂ ಅವರದೇ. (ಕಳೆದ ಹದಿನೈದು ವರ್ಷಗಳಿಂದ ಪೇಂಟಿಂಗ್ ಮಾಡುತ್ತಿರುವ ಕಾರ್ಟರ್ ತಮ್ಮ ಕೃತಿಗಳ ಪ್ರದರ್ಶನವನ್ನು ಏರ್ಪಡಿಸಿದ್ದುಂಟು) ಅಮೆರಿಕಾದ ಅಧ್ಯಕ್ಷನೊಬ್ಬ ಇಂಥ ಹವ್ಯಾಸಕ್ಕಿಳಿದಿದ್ದು ಇದೇ ಮೊದಲು. ಈಗ ಕಾರ್ಟರ್‌ಗೆ ೭೯ವರ್ಷ ವಯಸ್ಸು. ಸೃಜನಶೀಲ ಚಟುವಟಿಕೆಯಲ್ಲಿ ನಿರತ.

ಒಮ್ಮೆ ಅಧ್ಯಕ್ಷನಾದ ಬಳಿಕ ಯಾರೂ ಅಮೆರಿಕಾದಲ್ಲಿ ರಾಜಕೀಯದೆಡೆಗೆ ಮುಖ ಮಾಡುವುದಿಲ್ಲ. ಅಧಿಕಾರದಿಂದ ದೂರ ಉಳಿದರೂ ಅಧಿಕಾರದಲ್ಲಿದ್ದವರನ್ನು ಕೆಳಗಿಳಿಸಲು ಹುನ್ನಾರ ನಡೆಸುವುದಿಲ್ಲ. ತಮ್ಮ ಮಕ್ಕಳ, ನೆಂಟರನ್ನು ಕುರ್ಚಿ ಮೇಲೆ ಕುಳ್ಳಿರಿಸಲು ಸ್ಕೆಚ್ ಹಾಕುವುದಿಲ್ಲ. ಜನರನ್ನು, ಸಮಾಜವನ್ನು ಕಾಡುವ ಯಾವುದಾದರೂ ಒಂದು ವಿಷಯವನ್ನು ಕೈಗೆತ್ತಿಕೊಂಡು ಅದರಲ್ಲಿ ತೊಡಗಿಸಿಕೊಳ್ಳುತ್ತಾರೆ. ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ಬಳಿಕ ಜಿಮ್ಮಿಕಾರ್ಟರ್ ವಿಶ್ವಶಾಂತಿ ಹಾಗೂ ಆರೋಗ್ಯ ಕಾಳಜಿಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ವಿಶ್ವದಾದ್ಯಂತ ಪ್ರವಾಸ ಮಾಡಿದ. ಜನರನ್ನು, ಸಂಸ್ಥೆಯನ್ನು ಸಂಘಟಿಸಿದ. ಊರೂರಿಗೆ ಹೋಗಿ ಭಾಷಣಮಾಡಿದ. ರ್ವಾಂಡಾದ ಯುದ್ಧಭೂಮಿಯಲ್ಲಿ ನಡೆದುಹೋಗಿ ಫಿರಂಗಿಗಳ ಮೊನೆಯನ್ನು ಚುಂಬಿಸಿ ಬಂದ. ಕಾರ್ಟರ್‌ಗೆ ಶಾಂತಿಗಾಗಿ ನೀಡುವ ನೊಬೆಲ್ ಪ್ರಶಸ್ತಿಬಂತು. ಈಗ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಏಡ್ಸ್ ಬಗ್ಗೆ ಅರಿವು ಮೂಡಿಸಲು ದೇಶ ದೇಶ ಸುತ್ತುತ್ತಿದ್ದಾರೆ.

ಬ್ರಿಟನ್‌ನ ಉಪಪ್ರಧಾನಿ ಡೇವಿಡ್ಕೋಲ್ ಪಟ್ಟದಿಂದ ಇಳಿದ ಬಳಿಕ ಪತ್ರಿಕೋದ್ಯಮ ಶಿಕ್ಷಣ, ತರಬೇತಿಗಾಗಿ ತನ್ನ ಜೀವನವನ್ನು ಮುಡಿಪಾಗಿಟ್ಟ. ಥಾಮ್ಸನ್ ಫೌಂಡೇಷನ್ನಲ್ಲಿ ಅಧ್ಯಕ್ಷನಾಗಿ ಪತ್ರಕರ್ತರಿಗೆ ವೃತ್ತಿತರಬೇತಿ ಕೇಂದ್ರಗಳನ್ನು ತೆರೆದ. ಉಪಪ್ರಧಾನಿಯಾಗಿದ್ದ ಆತ ಪ್ರಧಾನಿಯಾಗುವುದಕ್ಕೆ ಮರಳಿ ಪ್ರಯತ್ನವ ಮಾಡಲಿಲ್ಲ.

ವಿನ್ಸ್ಟನ್ ಚರ್ಚಿಲ್ ಗೊತ್ತಲ್ಲ. ಎರಡನೆ ಮಹಾಯುದ್ಧದ ಕಾಲದಲ್ಲಿ ಬ್ರಿಟನ್‌ನ ಪ್ರಧಾನಿಯಾಗಿದ್ದವ. ವಿಶ್ವದ ಮಹಾನ್ ನಾಯಕರ ಸಾಲಿನಲ್ಲಿ ಮೇರು ವ್ಯಕ್ತಿತ್ವ. ಚರ್ಚಿಲ್ ಇಂದಿಗೂ Wartime GREAT Prime Minister ಎಂದೇ ಜನಜನಿತ. ಇಂಥ ಚರ್ಚಿಲ್ ಮಹಾಯುದ್ಧ ಮುಗಿದ ಬಳಿಕ ನಡೆದ ಚುನಾವಣೆಯಲ್ಲಿ. ದಯನೀಯ ಸೋಲನ್ನು ಕಂಡ. ಅವನಲ್ಲಿ ಇನ್ನೂ ಸಾಕಷ್ಟು ರಾಜಕಾರಣ ಉಳಿದಿತ್ತು. ನೇಪಥ್ಯಕ್ಕೆ ಸರಿಯುವಂಥ ಹಗುರಪಿಂಡ ಅವನದಾಗಿರಲಿಲ್ಲ. ಯುದ್ಧ ಕಾಲದಲ್ಲಿ ಬ್ರಿಟನನ್ನು ಜಯದ ಅಂಗಳದಲ್ಲಿ ನಿಲ್ಲಿಸಿದ ಚರ್ಚಿಲ್ ಚುನಾವಣೆಯಲ್ಲಿ ಸೋಲುಣ್ಣಬಹುದೆಂದು ನಿರೀಕ್ಷಿಸಿರಲಿಲ್ಲ. ಚರ್ಚಿಲ್ ಮತ್ತೆ ಧೂಳಿನಿಂದ ಎದ್ದು ಬರುವ ಶಪಥ ತೊಡಲಿಲ್ಲ. ತನ್ನ ಪಾಡಿಗೆ ತಾನು ಓದುವುದು, ಬರೆಯುವುದರಲ್ಲಿ ತೊಡಗಿದ. ಹಾಗಂತ ರಾಜಕೀಯದ ಮೇಲಿನ ಮುನಿಸು ಅಂದೇನೂ ಅಲ್ಲ. ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು ಅವನ ಉದ್ದೇಶವಾಗಿತ್ತು. ಅಚ್ಚರಿಯೆಂದರೆ ಚರ್ಚಿಲ್‌ಗೆ ಸಾಹಿತ್ಯಕ್ಕಾಗಿ ಮೀಸಲಿರುವ ನೊಬೆಲ್ ಪ್ರಶಸ್ತಿ ಬಂತು. ರಾಜಕಾರಣದಲ್ಲಿದ್ದರೂ ಆತ ತನ್ನ ಛಾಪನ್ನು ಮೂಡಿಸಿದ್ದು ಬರವಣಿಗೆಯಲ್ಲಿ.

ಬ್ರಿಟನ್‌ನ ಜಾನ್‌ಮೇಜರ್, ಅಮೆರಿಕ ಅಧ್ಯಕ್ಷರಾಗಿದ್ದ ರೂಸ್ವೆಲ್ಟ್, ಕೂಲಿಡ್ಜ್, ರೇಗನ್, ಜಾರ್ಜ್‌ಬುಶ್(ಸೀನಿಯರ್) ಮುಂತಾದವರೆಲ್ಲ ಅಧಿಕಾರದಿಂದ ಇಳಿದ ಬಳಿಕ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದರು. ಸಮಾಜ ಸೇವೆಗೆ ಮುಡಿಪಾಗಿಟ್ಟರು. ರಾಜಕಿಯದ ಕಡೆ ಕತ್ತೆತ್ತಿ ನೋಡಲಿಲ್ಲ.

ಏಕೆಂದರೆ ಇವರಿಗ್ಯಾರಿಗೂ ರಾಜಕಿಯ ಒಂದು ವೃತ್ತಿಯಾಗಿರಲಿಲ್ಲ. ಹೀಗಾಗಿ ನಿವೃತ್ತಿಯ ಬಗ್ಗೆ ಯೋಚಿಸಲಿಲ್ಲ. ತಲೆಕೆಡಿಸಿಕೊಳ್ಳಲಿಲ್ಲ. ಅಧಿಕಾರ ಮುಗಿಸಿ ಮನೆಗೆ ಬಂದು ಬೇರೆ ಕೆಲಸದಲ್ಲಿ ನಿರತರಾದರು. ಬಯಸಿದಾಗ ಸಮಾಜಕ್ಕೆ ಮಾರ್ಗದರ್ಶನ ನೀಡಿದರು. ಈ ಕಾರಣದಿಂದ ಆದೇಶಗಳಲ್ಲಿ ಕೈಕಾಲುಗಳಲ್ಲಿ ಕಸುವು ಇರುವವರು ರಾಷ್ಟ್ರದ ಚುಕ್ಕಾಣಿ ಹಿಡಿಯುತ್ತಾರೆ. ಅವಧಿ ಮುಗಿದ(Date bar) ನಂತರ ಬೇರೆ ರಂಗ ನೋಡಿಕೊಳ್ಳುತ್ತಾರೆ.

ನಮ್ಮ ದೇಶದಲ್ಲಿ ಇದು ಸಾಧ್ಯಾನಾ? ನಾಯಕತ್ವಕ್ಕಾಗಿ ಜೀವನವಿಡಿ ಒಬ್ಬನನ್ನು ನೆಚ್ಚಿಕೊಳ್ಳುವುದಕ್ಕೂ ಎಂಥ ಸಹನೆ ಬೇಕಲ್ಲವೆ?

(ಸಾಭಾರ ವಿಜಯ ಕರ್ನಾಟಕ)

****

ಸಂವಿಧಾನ ಸಭೆಯ ಒಂದು ಒಳನೋಟ

-ಡಾ|| ಧರ್ಮಪಾಲ್

ಭಾರತದ ಸಂವಿಧಾನದ ಗುರಿಗಳು ಮತ್ತು ಉದ್ದೇಶಗಳು ಈ ಕುರಿತಾದ ಒಂದು ಗೊತ್ತುವಳಿಯನ್ನು ೧೯೪೬ ಡಿ. ೧೩ ರಂದು ಸವಿಧಾನ ರಚನಾ ಸಭೆಯಲ್ಲಿ ಮಂಡಿಸಲಾಯಿತು. ೧೯೪೬ ನೇ ಇಸವಿ ಅಲ್ಲೋಲ ಕಲ್ಲೋಲತೆಯಿಂದ ಮತ್ತು ಅನಿಶ್ಚಿತತೆಯಿಂದ ಕೂಡಿದ ಅವಧಿಯಾಗಿತ್ತು. ಭಾರತದ ೨ನೇಯ ಪ್ರಮುಖ ಪಕ್ಷವಾಗಿದ್ದ ಮುಸ್ಲಿಂಲೀಗ್ ಸಂವಿಧಾನ ಸಭೆಯನ್ನು ಬಹಿಷ್ಕರಿಸಿತ್ತು ಮತ್ತು ಅಂದಿನ ಬಹುಸಂಖ್ಯಾತ ದೇಶಿಯ ಸಂಸ್ಥಾನಗಳು ದೇಶದ ಮುಖ್ಯ ವಾಹಿನಿಯಲ್ಲಿ ಸೇರಿಕೊಂಡಿರಲಿಲ್ಲ. ಆದರೂ ಗಾಂಧೀಜಿ ಬಹಳವಾಗಿ ದೇಶದೊಟ್ಟಿಗಿದ್ದರು. ಆ ಗೊತ್ತುವಳಿಯಲ್ಲಿ ಸ್ವತಂತ್ರ ಭಾರತದ ಹಳ್ಳಿಗಳ ಸ್ಥಾನವನ್ನು ಕುರಿತಾಗಿ ಯಾವುದೆ ನಿರ್ದಿಷ್ಟ ಅಭಿಪ್ರಾಯ ಇರಲಿಲ್ಲ. ಅದೇ ರೀತಿ ಆಡಳಿತದಲ್ಲಿ ಅವುಗಳ ಪಾತ್ರವೇನು ಮತ್ತು ಭಾರತೀಯ ಹಳ್ಳಿಗಳಿಗೆ ಸಂಬಂಧಿಸಿದಂತೆ ಸ್ವರಾಜ್ಯದ ಅರ್ಥವೇನು ಎಂಬ ಅಭಿಪ್ರಾಯವೂ ಸಹ ಆ ಗೊತ್ತುವಳಿಯಲ್ಲಿ ಇರಲಿಲ್ಲ. ಈ ವಿಷಯವು ಗೊತ್ತುವಳಿಯಲ್ಲಿ ಪ್ರಸ್ತಾಪಿಸದೇ ಇರುವುದಕ್ಕೆ ಕಾರಣವೇನೆಂದರೆ "ಭಾರತೀಯರ ಹೃದಯದಲ್ಲಿರುವ ಆಶೋತ್ತರಗಳು ಎಂಬಂಥಹ ಮಾತುಗಳು" ಸಂವಿಧಾನದಲ್ಲಿ ಬೇರೆಡೆ ಉಲ್ಲೇಖಿತವಾಗಿರುವುದರಿಂದ ಈ ಮಾತಿನಲ್ಲಿಯೇ ಹಳ್ಳಿಗಳ ಸ್ಥಾನ-ಮಾನದ ವಿಷಯವು ಬಂದಂತಾಯಿತು ಎಂದು ಭಾವಿಸಿದ್ದು. ಅಲ್ಲದೆ ಸಂವಿಧಾನ ರಚನಾ ಸಭೆಯ ಮೇಲೆ ಗಾಂಧೀಜಿಯವರ ಚೇತನದ ನೆರಳು ನಿಃಸಂಶಯವಾಗಿ ಇದ್ದುದು ಮತ್ತು ಸಂವಿಧಾನ ಸಭೆಯು ಕೈಗೊಳ್ಳುವ ಕಾರ್ಯಕ್ಕೆ ಗಾಂಧಿಯವರ ಆಶೀರ್ವಾದ ಇದೆ ಎಂದು ಬಾವಿಸಲಾಗಿತ್ತು.

ಗೊತ್ತುವಳಿಯನ್ನು ಜವಹರಲಾಲ್ ನೆಹರು ಮಂಡಿಸಿದರು ಮತ್ತು ಮಂಡಿಸುವ ಸಂಧರ್ಭದಲ್ಲಿ ಈ ರೀತಿ ಹೇಳಿದರು : " ನಾವು ಸ್ಪಷ್ಟವಾಗಿ ಪ್ರಜಾಪ್ರಭುತ್ವವನ್ನೆ ನಮ್ಮ ಗುರಿಯನ್ನಾಗಿಟ್ಟು ಕೊಂಡಿದ್ದೇವೆ. ಪ್ರಜಾಪ್ರಭುತ್ವಕ್ಕಿಂತ ಕಡಿಮೆಯಾದಾದ ಇನ್ಯಾವ ವ್ಯವಸ್ಥೆಯನ್ನೂ ಗುರಿಯನ್ನಾಗಿಟ್ಟುಕೊಂಡಿಲ್ಲ. ಅದು ಯಾವ ಪ್ರಕಾರದ ಪ್ರಜಾಪ್ರಭುತ್ವ, ಅದು ಯಾವ ಸ್ವರೂಪವನ್ನು ಪಡೆಯಬಹುದು ಇತ್ಯಾದಿ ಬೇರೆ ವಿಷಯ. ಆಧುನಿಕ ಕಾಲದ ಪ್ರಾಜಾಪ್ರಭುತ್ವಗಳು ಅದರಲ್ಲೂ ಯೂರೋಪ್ ಮತ್ತು ಇತರ ಸ್ಥಳಗಳಲ್ಲಿರುವ ಪ್ರಜಾಪ್ರಭುತ್ವಗಳು ವಿಶ್ವದ ಪ್ರಗತಿಯಲ್ಲಿ ಬಹಳಷ್ಟು ದೊಡ್ಡ ಪಾತ್ರವನ್ನು ವಹಿಸಿವೆ. ಆದರೂ ಸಹ ಅವು ಸಂಪೂರ್ಣವಾಗಿ ಪ್ರಜಾತಾಂತ್ರಿಕವಾಗಿ ಇರಬೇಕಾದರೆ, ನಿಕಟ ಭವಿಷ್ಯದಲ್ಲಿಯೇ ಅವು ತಮ್ಮ ಸ್ವರೂಪವನ್ನು ಕೊಂಚ ಮಟ್ಟಿಗಾದರೂ ಬದಲಾಯಿಸಕೊಳ್ಳ ಬೇಕಾಗಿಲ್ಲವೇ

ಎಂಬುದರ ಬಗ್ಗೆ ಸಂಶಯ ಮೂಡುತ್ತದೆ. ತನ್ನನ್ನುತಾನು ಒಂದು ಪ್ರಜಾಪ್ರಭುತ್ವ ದೇಶವೆಂದು ಕರೆದುಕೊಳ್ಳುವ ಯಾವುದೋ ಒಂದು ದೇಶದಲ್ಲಿಯ ಪ್ರಜಾತಾಂತ್ರಿಕ ಪದ್ಧತಿಯನ್ನಾಗಲಿ, ಸಂವಿಧಾನವನ್ನಾಗಲಿ ನಕಲುಮಾಡುವವರು ನಾವಲ್ಲ. ನಾವು ಸಾಧ್ಯವಾದರೆ ಅಂತಹ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉತ್ತಮ ಗೊಳಿಸುವೆವು. ಯಾವುದೇ ಸಂಧರ್ಭದಲ್ಲೂ ನಾವು ಇಲ್ಲಿ ಸ್ಥಾಪಿಸುವ ಯಾವುದೇ ಪದ್ಧತಿಯ ಸರ್ಕಾರವಿರಲಿ ಅದು ನಮ್ಮ ಜನತೆಯ ಗುಣಸ್ವಭಾವಕ್ಕೆ ಹೊಂದಿ ಕೊಳ್ಳುವಂತದ್ದಾಗಿರಬೇಕು ಮತ್ತು ಅವರು ಒಪ್ಪುವಂತದ್ದಾಗಿರಬೇಕು. ನಾವು ಪ್ರಜಾಪ್ರಭುತ್ವ ಪಕ್ಷಪಾತಿಗಳಾಗಿ ಇರುತ್ತೇವೆ. ಆ ಪ್ರಜಾಪ್ರಭುತ್ವಕ್ಕೆ ಯಾವ ಸ್ವರೂಪವನ್ನು ಕೊಡಬೇಕೆಂಬುದು ಈ ಸಭೆಗೆ ಸೇರಿದ ವಿಷಯ. ಅದು ಸಂಪೂರ್ಣ ಪ್ರಮಾಣದ ಪ್ರಜಾಪ್ರಭುತ್ವವಾಗಿರುತ್ತದೆಂದು ನಾನು ಆಶಿಸುತ್ತೇನೆ''

ಆನಂತರ ಮಾತನಾಡಿದ ಅನೇಕ ಭಾಷಣಕಾರರು ಈ ಗೊತ್ತುವಳಿಯನ್ನು ಸಮರ್ಥಿಸಿ ರಾಜಕೀಯ ವ್ಯವಸ್ಥೆಯಲ್ಲಿ ಹಳ್ಳಿಗಳಿಗೆ ಸಂಬಂಧಿಸಿದಂತೆ ಸ್ವರಾಜ್ಯದ ಅರ್ಥ ಈ ಕುರಿತಾಗಿ ಸಂಕ್ಷಿಪ್ತವಾಗಿ ಮಾತನಾಡಿದರು. ಈ ಎಲ್ಲಾ ಭಾಷಣಕಾರರ ಮಾತುಗಳ ಮೇಲೆ ಆಗತಾನೆ ಗಾಂಧೀಜಿಯವರು ಕೊಟ್ಟಿದ್ದ ಹೇಳಿಕೆಯ ಪ್ರಭಾವದ ಛಾಯೆಇತ್ತು.

ಗಾಂಧೀಜಿಯವರ ಹೇಳಿಕೆ ಈ ರೀತಿ ಇತ್ತು "ಇಂದು ಅಧಿಕಾರದ ಕೇಂದ್ರ ಹೊಸದಿಲ್ಲಿ ಅಥವಾ ಕಲ್ಕತ್ತ ಮತ್ತು ಮುಂಬಯಿಯಂತಹ ದೊಡ್ಡ ನಗರಗಳಲ್ಲಿದೆ. ಆ ಅಧಿಕಾರವು ಭಾರತದ ೭ಲಕ್ಷ ಹಳ್ಳಿಗಳಿಗೆ ಹಂಚಿಹೋಗ ಬೇಕೆಂದು ಬಯಸುತ್ತೇನೆ ಆಗ ಸ್ವಯಂ ಪ್ರೇರಿತ ಸಹಕಾರವಿರುವುದು. ಅಂದರೆ, ನಾಜಿಗಳ ಕ್ರಮಗಳಿಂದ ನಿರ್ಮಿಸಿದುಂತಹ ಸಹಕಾರವಲ್ಲ. ಸ್ವಯಂ ಪ್ರೇರಿತ ಸಹಕಾರವು ನಿಜವಾದ ಸ್ವಾತಂತ್ರ್ಯಕ್ಕೆ ಜನ್ಮಕೊಡುವುದು ಮತ್ತು ಈಗ ಸೋವಿಯತ್ ರಷ್ಯದಲ್ಲಿರುವ ಹೊಸ ವ್ಯವಸ್ಥೆಗಿಂತ ಬಹಳಷ್ಟು ಉತ್ತಮವಾಗಿರುವುದು... ರಷ್ಯಾದಲ್ಲಿ ದಬ್ಬಾಳಿಕೆಯಿದೆ ಎಂದು ಕೆಲವರು ಹೇಳುತ್ತಾರೆ. ಆದರೆ ಆ ಕಠೋರತೆ ಅತ್ಯಂತ ದೀನರ ಮತ್ತು ಬಡವರ ಒಳ್ಳೆಯದಕ್ಕಾಗಿದೆ. ಆ ಕಾರಣದಿಂದ ಅದು ಒಳ್ಳೆಯದು. ನನ್ನ ಮಟ್ಟಿಗೆ ಮಾತ್ರ ಅದರಲ್ಲಿ ಯಾವ ಒಳ್ಳೆಯ ಅಂಶವೂ ಇಲ್ಲ."

ಸಂವಿಧಾನ ಸಭಾ ಕಾರ್ಯಕಲಾಪಗಳಿಗೆ ಒಂದು ತಿಂಗಳ ವಿರಾಮವನ್ನು ಕೊಡಲಾಯಿತು. ಏಕೆಂದರೆ ಈ ಅವಧಿಯಲ್ಲಿ ಸಭೆಯ ಹೊರಗಿರುವಂತವರು ಬಂದು ಸೇರಿಕೊಳ್ಳಲೆಂಬ ಉದ್ದೇಶವಿತ್ತು. ಆದರೆ ಆ ರೀತಿ ಆಗಲಿಲ್ಲ. ಈ ಮಧ್ಯ ಸ್ವಾತಂತ್ರ್ಯಕ್ಕಾಗಿ ಮಾತುಕತೆಗಳು ನಡೆಯುತ್ತಿದ್ದವು. ದೇಶದ ಐಕ್ಯತೆ ಗಂಡಾಂತರದಲ್ಲಿತ್ತು. ಐಕ್ಯತೆಯನ್ನು ಕುರಿತು ಅಧಿಕಾರಯುತವಾಗಿ


ಮಾತನಾಡಬೇಕಾಗಿದ್ದಂತವರು ಆ ಸಮಯದಲ್ಲಿದ್ದ ಇತರ ಗಂಭೀರ ಸಮಸ್ಯೆಗಳ ಪರಿಹಾರದಲ್ಲಿ ತೊಡಗಿದ್ದರು.

ಸಂವಿಧಾನ ರಚನಾಸಭೆಯ ಕಾರ್ಯಾಲಯ ತನ್ನ ಕೆಲಸದಲ್ಲಿ ನಿರತವಾಗಿತ್ತು. ಆ ಕಾರ್ಯಾಲಯಕ್ಕೆ ಶ್ರೀ ಬೆನಗಲ್ ನರಸಿಂಹರಾವ್‌ರವರು ಸಮಾಲೋಚಕರಾಗಿದ್ದರು ಅವರ ಸಹಾಯದೊಂದಿಗೆ ಸಂವಿಧಾನ ಕಾರ್ಯಾಲಯವು ಯುರೋಪ್, ಅಮೆರಿಕಾ ಮತ್ತು ಸೋವಿಯತ್ ರಷ್ಯಾ ಮುಂತಾದ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡುತ್ತಾ‌ಹೋಯಿತು. ಅಂತಿಮವಾಗಿ ೧೯೪೭ ಆಗಸ್ಟ್‌ನಲ್ಲಿ ಸಂವಿಧಾನ ಸಭೆಯ ಮುಂದೆ ಒಂದು ಕರಡನ್ನು ಮಂಡಿಸಿತು. ಅದೇ ಸಮಯದಲ್ಲಿ ಅಂದರೆ ೧೯೪೭ ಆಗಸ್ಟ್ ೨೯ ರಂದು ಸಂಸತ್ ವ್ಯವಹಾರಗಳ ಮಂತ್ರಿ ಒಂದು ಗೊತ್ತುವಳಿಯನ್ನು ತಂದರು. ಆ ಗೊತ್ತವಳಿಯ ಪ್ರಕಾರ ಸಂವಿಧಾನ ಕರಡನ್ನು ಪರಿಶೋಧಿಸುವುದಕ್ಕಾಗಿಯೂ ಮತ್ತು ಅಗತ್ಯವೆನಿಸುವ ತಿದ್ದುಪಡಿಗಳನ್ನು ಸೂಚಿಸುವುದಕ್ಕಾಗಿಯೂ ಒಂದು ಸಮಿತಿಯುನ್ನು ರಚಿಸಬೇಕೆಂದು ತೀರ್ಮಾನಿಸಲಾಯಿತು. ಸ್ವಲ್ಪ ಚರ್ಚೆಯ ನಂತರ ಆ ಗೊತ್ತುವಳಿಯು ಆ ದಿನವೇ ಅಂಗೀಕೃತವಾಯಿತು. ಆ ಸಮಿತಿಯ ಸದಸ್ಯರು ಈ ರೀತಿ ಇದ್ದರು :- ೧) ಶ್ರೀ ಅಲ್ಲಾಡಿ ಕೃಷ್ಣಸ್ವಾಮಿಅಯ್ಯರ್. ೨) ಶ್ರೀ ಎನ್. ಗೋಪಾಲಸ್ವಾಮಿ ಅಯ್ಯರ್. ೩) ಗೌರವಾನ್ವಿತ ಡಾ॥ ಬಿ.ಆರ್.ಅಂಬೇಡ್ಕರ್. ೪) ಶ್ರೀ ಕೆ.ಎಂ.ಮುನ್ಸಿ. ೫) ಸಯ್ಯದ್ ಮಹಮ್ಮದ್ ಸದ್ದುಲ್ಲಾ ೬) ಶ್ರೀ ಬಿ. ಎಲ್. ವಿಟ್ಟರ್ ೭) ಶ್ರೀ ಡಿ.ಪಿ. ಖೈತಾನ್.

ಈ ಪರಿಶೋಧನಾ ಸಮಿತಿ ಪರಿಷ್ಕರಿಸಿದ ಕರಡನ್ನು ಸಂವಿಧಾನವನ್ನು ೧೯೪೮ ನವೆಂಬರ್ ೪ ರಂದು ಸಂವಿಧಾನ ಸಭೆಯಲ್ಲಿ ಮಂಡಿಸಲಾಯಿತು. ಪರಿಶೋಧನಾ ಸಮಿತಿ ತನ್ನ ಪುನರ್ ವಿಮರ್ಶಿತ ಕರಡನ್ನು ಸಲ್ಲಿಸುವುದಕ್ಕೆ ೧೫ ತಿಂಗಳುಗಳು ಬೇಕಾದವು. ಈ ಮಧ್ಯಂತರ ಅವಧಿಯಲ್ಲಿ ೧೯೪೮ ಏಪ್ರಿಲ್‌ನಲ್ಲಿಯೇ ಯೋಚಿಸಲಾಗಿದ್ದ ರಾಜ್ಯ ವ್ಯವಸ್ಥೆಯಲ್ಲಿ ಹಳ್ಳಿಗಳ ಸ್ಥಾನವೇನು ಎಂಬುದರ ಬಗ್ಗೆ ಬಹಳಷ್ಟು ವಿವಾದ ಮತ್ತು ಚರ್ಚೆನಡೆಯಿತು. ಆಗ ಸಂವಿಧಾನ ಸಭೆಯ ಅಧ್ಯಕ್ಷರು ಈ ವಿಷಯವನ್ನು ಸಂವಿಧಾನ ಸಲಹಾಕಾರನ ಅಭಿಪ್ರಾಯ ಪಡುವುದಕ್ಕಾಗಿ ಅವರ ಬಳಿಗೆ ಕಳುಹಿಸಿದರು.

(ಆಧಾರ ಸಾಮಾಜಿಕ ಇತಿಹಾಸಜ್ಞರಾದ ಶ್ರೀ ಧರ್ಮಪಾಲ್ ಸಂಗ್ರಹಿಸಿದ ಸಂವಿಧಾನ ರಚನಾ ಸಭೆಯ ಕಾರ್ಯ ಕಲಾಪಗಳು ಎಂಬ ಗ್ರಂಥ.)

ಜನಪದ ನಿಲಯದ ಅಂತರಂಗದಲ್ಲಿ-೩



೧೯೫೫ ರ ಕೊನೆಯ ಭಾಗ. ಆಗ ಮೇಲುಕೋಟೆಯಲ್ಲಿ ಇನ್ನೂ ಇಂದಿನಷ್ಟು ಕಟ್ಟಡಗಳ ನಿರ್ಮಾಣದ ಭರಾಟೆಯಿರಲಿಲ್ಲ; ಆಟೋರಿಕ್ಷಾ, ಟ್ರಾಕ್ಟರ್, ಬೈಕ್‌ಗಳ ಕರ್ಕಶ ಧ್ವನಿಯಾಗಲಿ, ಮಾಲಿನ್ಯ ತುಂಬಿದ ಹೊಗೆಯಾಗಲಿ ಇರಲಿಲ್ಲ, ಸೈಕಲ್ ಸಹ ಇರಲಿಲ್ಲ! ಮೇಲುಕೋಟೆಯ ಮುಖ್ಯ ರಸ್ತೆಯಾಗಿರುವ ಕಲ್ಯಾಣಿ ಬೀದಿಯು ಹಾಸು ಕಲ್ಲುಗಳಿಂದ ನಿರ್ಮಿತವಾಗಿ ತನ್ನ ಪುರಾತನತನವನ್ನು ಉಳಿಸಿಕೊಂಡಿತ್ತು. ಆ ಕಲ್ಲುಗಳ ಹಾಸು ಸಮತಟ್ಟಾಗಿರಲಿಲ್ಲ. ಮಧ್ಯ-ಮಧ್ಯ ಉಬ್ಬುತಗ್ಗುಗಳಿದ್ದವು. ಅಲ್ಲದೆ ಸ್ವಲ್ಪ ಏರುಮುಖವಾಗಿಯೂ ಇತ್ತು. ಆದ್ದರಿಂದ ಆ ಬೀದಿಯಲ್ಲಿ ಸಹಜವಾಗಿ ನಡೆದುಕೊಂಡು ಬರುವುದೂ ಕಷ್ಟದಾಯಕವಾಗಿತ್ತು. ಈ ಬೀದಿ ಬಹಳ ಪುರಾತನವೆಂಬುದಕ್ಕೆ ಆ ಕಲ್ಲುಗಳ ನುಣುಪು ಸಾಕ್ಷಿಯಾಗಿತ್ತು. ಕಲ್ಯಾಣಿ ಬೀದಿಯ ಮೂಲಕವೇ ಸುಪ್ರಸಿದ್ಧ ಕಲ್ಯಾಣಿ ಸರೋವರ ಮತ್ತು ಅದರ ಸುತ್ತಿರುವ ವರಹಾಕ್ಷೇತ್ರ, ಭುವನೇಶ್ವರಿ, ಬಳೆಮಂಟಪ, ಕಲ್ಯಾಣ ಮಂಟಪಗಳಿಗೆ ಹೋಗಬೇಕಾಗಿತ್ತಲ್ಲದೆ, ಶ್ರೀ ಯೋಗಾನರಸಿಂಹಸ್ವಾಮಿ ಬೆಟ್ಟ ಹತ್ತಲು ಇರುವ ಆ ಮೆಟ್ಟಲುಗಳ ಹಂತವನ್ನು ತಲುಪಲು ಕಲ್ಯಾಣಿ ಬೀದಿಯ ಮೂಲಕವೇ ಹೋಗಬೇಕು. ಆದ್ದರಿಂದ ಮೇಲುಕೋಟೆಗೆ ಬರುವ ಪ್ರತಿಯೊಬ್ಬ ಯಾತ್ರಾರ್ಥಿಯು ಮತ್ತು ವೈರಮುಡಿ, ಕೃಷ್ಣರಾಜಮುಡಿ, ರಾಜಮುಡಿ, ರಾಮಾನುಜರ ಪುನರ್‌ವಸು ಉತ್ಸವ ಹಾಗೂ ಜಾತ್ರೆಯ ಮೊದಲ ಮತ್ತು ಅನಂತರ ನಡೆಯುವ ಉತ್ಸವಗಳಿಗಾಗಿ ಓಡಾಡುವ ಅಸಂಖ್ಯಾತ ಭಕ್ತರ ಓಡಾಟದಿಂದ ಕಲ್ಯಾಣಿಯ ಹಾಸುಕಲ್ಲುಗಳು ಸವೆದು ನುಣುಪಾಗಿರುವುದು ಅದರ ಪ್ರಾಚೀನತೆಯನ್ನು ಸಾರುತ್ತಿತ್ತು. ಇದುವರೆಗೂ ೧೦೦೦ ವೈರಮುಡಿ ಮತ್ತು ಇತರ ಉತ್ಸವಗಳು ನಡೆದಿರಬಹುದು. ಅಂದಿನಿಂದಲೂ ಈ ಕಲ್ಯಣಿ ಬೀದಿಯಲ್ಲಿ ಓಡಾಡಿದ ಜನಸಂಖ್ಯೆ ಎಷ್ಟು ದೊಡ್ಡದಾಗಿರಬಹುದೆಂದು ಊಹಿಸಬಹುದು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನರು ಈ ಬೀದಿಯಲ್ಲಿ ಓಡಾಡುತ್ತಾರೆಂಬ

ದೂರದೃಷ್ಟಿಯಿಂದಲೋ ಏನೋ ಈ ಊರಿನ ಹಳೆಯ-ಹಳೆಯ ತಲೆಮಾರಿನವರು ಅಚ್ಚುಕಟ್ಟಾಗಿ ಮತ್ತು ಬಂದೋಬಸ್ತಾಗಿ ಕಲ್ಲು ಹಾಸುಗಳನ್ನು ಉಪಯೋಗಿಸಿ ಈ ರಸ್ತೆಯನ್ನು ನಿರ್ಮಿಸಿದ್ದರು ಎಂದು ಸಹಜವಾಗಿ ಯಾರಿಗಾದರೂ ಹೊಳೆಯುತ್ತದೆ. ಕಲ್ಲುಹಾಸುಗಳ ಬದಲಾಗಿ ಇನ್ನು ಬೇರೆ ಯಾವುದೇ ಪ್ರಕಾರದ ರಸ್ತೆ ಮಾಡಿದ್ದರೂ ೧೦೦೦ ವರ್ಷ ಉಳಿಯುತ್ತಿರಲಿಲ್ಲ. ಆಧುನಿಕ ರಸ್ತೆನಿರ್ಮಾಣದ ಶೈಲಿ ಅದೃಷ್ಟವಶಾತ್ ಆಗಿನ್ನೂ ಬಂದಿರಲಿಲ್ಲ! ಹಾಗೇನಾದರೂ ಬಂದಿದ್ದರೆ ಮತ್ತು ಆ ಶೈಲಿಯಲ್ಲಿ ಕಲ್ಯಾಣಿ ರಸ್ತೆಯನ್ನು ನಿರ್ಮಿಸಿದ್ದರೆ ಎಷ್ಟು ಜನ ವೃದ್ಧ ಭಕ್ತರು ತಮ್ಮ ಕೈಕಾಲುಗಳನ್ನು ಮುರಿದು ಕೊಳ್ಳುತ್ತಿದ್ದರೋ! ಇನ್ನೊಂದು ಸಲ ಯದುಗಿರಿಗೆ ಬರುವ ಯೋಚನೆಯನ್ನೇ ಮಾಡುತ್ತಿರಲಿಲ್ಲವೇನೋ. ಈ ಕಲ್ಯಾಣಿ ಬೀದಿಯಲ್ಲಿ ಎಂಥೆಂಥ ಮಹಾನುಭಾವರು ಭಗ್ವದ್‌ಭಕ್ತರು ಸಾಹಿತಿಗಳು ಪಂಡಿತರು ಓಡಾಡಿದ್ದರೊ. ಮೇಲುಕೋಟೆಯಲ್ಲಿ ೧೦೦ ವರ್ಷಗಳಿಗಿಂತಲೂ ಹಳೆಯದಾದ ಸಂಸ್ಕೃತ ಪಾಠಶಾಲೆಯಿರುವುದರಿಂದ ಆ ಪಾಠಶಾಲೆಯಲ್ಲಿ ಆಗ ಇದ್ದ ಪಂಡಿತರೆಲ್ಲರೂ ಸಾಕಷ್ಟು ವಿದ್ವತ್ತನ್ನು ಪಡೆದವರಾಗಿದ್ದರು; ಮುಖ ಕಾಂತಿಯುಳ್ಳವರೂ, ವರ್ಚಸ್ಸುಳ್ಳವರೂ ಆಗಿದ್ದರು. ಇಂಥ ಐತಿಹಾಸಿಕವೂ, ಪವಿತ್ರವೂ ಆದ ಕಲ್ಯಾಣಿ ಬೀದಿಯ ಪಾರ್ಶ್ವದಲ್ಲಿ ಜನಪದ ನಿಲಯ ತನ್ನ ಪೂರ್ವರೂಪದಲ್ಲಿ ನಿಂತಿತ್ತೆಂಬುದು ಭಾವನಾತ್ಮಕವಾಗಿ ರೋಮಾಂಚನಕಾರಿಯಾದ ಸಂಗತಿ. ಇದಕ್ಕೆಲ್ಲ ಇನ್ನಷ್ಟು ಮಹತ್ವವನ್ನು ತಂದು ಕೊಡುವಂತೆ ೧೯೫೯ ರಲ್ಲಿ ವಿನೋಬಾ ಭಾವೆ ಈ ಮನೆಯೊಳಗೆ ಬಂದು ಮನೆಯ ಮಧ್ಯದ ಪ್ರಾಕಾರದಲ್ಲಿ ಒಂದೆರಡು ನಿಮಿಷ ನಿಂತದ್ದು ಮತ್ತು ೧೯೬೩ ರಲ್ಲಿ ಜಯಪ್ರಕಾಶ ನಾರಾಯಣರು ಬಂದು ಆತಿಥ್ಯ ಸ್ವೀಕರಿಸಿದಂತಹ ಘಟನೆಗಳು ನಡೆದು ಹೋಗಿವೆ *

(ಮುಂದುರಿಯುವುದು)

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ವಾಚಕ ಮಿತ್ರರಲ್ಲಿ ವಿನಂತಿ

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖ ಬೆಲೆ ೧೦/-ರೂ.ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಪ್ರಕಾಶಕರು

KA-SKMND-470-2003-05
Regd. no. KAR/KAN/2000/3820

ತೆರೆದ-ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist. mandya – 571431
Phone : 08236 – 298754 e-mail : janapada@yahoo.com